ಐಕ್ಯರಂಗ

ವಾರಪತ್ರಿಕೆ

ಭಾರತಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 30 ಜುಲೈ 22, 1984 ಬೆಲೆ 60 ಪೈಸೆ.

ಛಿದ್ರಕಾರಿ ಶಕ್ತಿಗಳ ವಿರುದ್ಧ ಆಂದೋಲನಕ್ಕೆ ಕರೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಜುಲೈ 15-16 ರಂದು ಬೆಂಗಳೂರಿನಲ್ಲಿ ಸಭೆ ಸೇರಿ, ದೇಶದ ಹಾಗೂ ರಾಜ್ಯದ ರಾಜಕೀಯ ಪರಿಸ್ಥಿತಿ, ಕೇಂದ್ರ ಸರಕಾರದ ಧೋರಣೆಯಿಂದಾಗಿ ದೇಶದ ಹಲವಾರು ಪ್ರದೇಶಗಳಲ್ಲಿ ಮುಖ್ಯವಾಗಿ, ಪಂಜಾಬ್, ಕಾಶ್ಮೀರ, ಅಸ್ಸಾಂ, ಮಹಾರಾಷ್ಟ್ರ, ಕರ್ನಾಟಕಗಳಲ್ಲಿ ಬೆಳೆದು ಬರುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳ, ಮತೀಯವಾದಿಗಳ ಬೆಳವಣಿಗೆಗಳನ್ನು ಪರಿಶೀಲಿಸಿತು. ಇಂಥ ಮತೀಯ, ಧರ್ಮೀಯ, ಉಗ್ರಗಾಮಿಗಳಿಗೆಲ್ಲ ಆಳುವ ಪಕ್ಷವೇ, ತನ್ನ ರಾಜಕೀಯ ದುರುದ್ದೇಶದ ಸಾಧನೆಗಾಗಿ ಪ್ರೋತ್ಸಾಹ ನೀಡುತ್ತಿರುವುದನ್ನು ಗಮನಿಸಿತು. ಪಂಜಾಬ್ ಸಮಸ್ಯೆಯ ಪರಿಹಾರಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೆಯೇ ಇತರ ವಿರೋಧ ಪಕ್ಷಗಳು ಸೂಚಿಸಿದ ಪರಿಹಾರ ಮಾರ್ಗವನ್ನು ಬಿಟ್ಟು ಕೊಟ್ಟು, ತನ್ನ ಪಕ್ಷದ ಬೆಂಬಲಿಗನಾದ ಭಿಂದ್ರನ್‌ವಾಲೆ ಮತ್ತು ಅವನ ಬೆಂಬಲಿಗರಿಗೆ ಬ್ಯಾಂಕ್ ದರೋಡೆ, ನಿರಪರಾಧಿಗಳ ಕೊಲೆ, ಸ್ವರ್ಣ ಮಂದಿರದಲ್ಲಿ ಶಸ್ತ್ರಾಸ್ತ್ರಗಳ ಸಂಗ್ರಹಕ್ಕೆಲ್ಲ ಅವಕಾಶ ಮಾಡಿ ಕೊಟ್ಟಿರುವುದನ್ನು ಖಂಡಿಸಿ, ಪರಿಸ್ಥಿತಿ ಹದ್ದು ಮೀರಿ ಹೋಗುತ್ತಿರುವುದನ್ನು ಕಂಡು ಕೊನೆಗೆ ಸೈನಿಕ ಕ್ರಮಕ್ಕೆಗೊಳ್ಳುವಂಥ ಸಂದಿಗ್ಧ ಪರಿಸ್ಥಿತಿಯನ್ನುಂಟು ಮಾಡಲು ಇಂದಿರಾ ಸರಕಾರವೇ ಕಾರಣವೆಂಬುದನ್ನೂ, ತನ್ನ ಸರ್ವಾಧಿಕಾರವನ್ನು ಸ್ಥಾಪಿಸುವ ದುರುದ್ದೇಶದಿಂದ ಕಾಶ್ಮೀರದ ಡಾ॥ ಫರೂಕ್ ಅಬ್ದುಲ್ಲಾ ಅವರ ಸರಕಾರವನ್ನು ಕಿತ್ತೊಗೆದಿರುವುದರಿಂದುಂಟಾದ ಪರಿಣಾಮವನ್ನೂ, ಪರಿಗಣಿಸಿ, ರಾಜ್ಯ ಸಮಿತಿ ಒಂದು ತೀರ್ಮಾನ ಕೈಗೊಂಡಿದೆ.

ಬೆಳೆದು ಬರುತ್ತಿರುವ ಎಡ ಶಕ್ತಿಗಳ ಆಂದೋಲನ, ಇಂದಿರಾ ಸರಕಾರದ ವೈಫಲ್ಯಗಳನ್ನು ಕಂಡು ಅಮೇರಿಕನ್ ಸಾಮ್ರಾಜ್ಯ ಶಾಹಿಗಳೂ, ಹಾಗೆಯೇ ಕೆಲವು ಕ್ರಿಶ್ಚನ್ ಮಿಶಿನರಿಗಳೂ, ಸಾಂಪ್ರದಾಯವಾದಿ ಮುಸ್ಲಿಂ-ಹಿಂದೂ ಸಂಘಟನೆಗಳೂ, ಜನರಲ್ಲಿ ಜಾತೀಯ, ಧರ್ಮೀಯ ಹಾಗೂ ಪ್ರಾದೇಶಿಕತೆಯ ಸಂಕುಚಿತ ಮನೋ ಭಾವನೆಗಳನ್ನು ಬೆಳೆಸಿ ಒಂದು ಜಾತಿ, ಧರ್ಮದವರನ್ನು ಮತ್ತೊಂದು ಜಾತಿ-ಧರ್ಮದವರ ವಿರುದ್ಧ ಎತ್ತಿ ಕಟ್ಟಿ, ದೇಶದ ಐಕ್ಯತೆ, ಜಾತಿ ಸೌಹಾರ್ದತೆಯನ್ನು ನಾಶ ಮಾಡಿ ಪ್ರತ್ಯೇಕತೆಯ ವಿಷ ಬೀಜವನ್ನು ಬಿತ್ತುತ್ತಿದ್ದಾರೆ. ಇದರಿಂದಾಗಿ ಸಂಘಟಿತ ಕಾರ್ಮಿಕರಲ್ಲೂ, ನೌಕರದಾರರಲ್ಲೂ ಒಡಕುಂಟಾಗಿ ಆರ್ಥಿಕ ಬಿಕ್ಕಟ್ಟಿನ ವಿರುದ್ಧ ಹೋರಾಡಲು ಸಾಧ್ಯವಾಗದಂತಾಗುತ್ತದೆ. ಹಾಗಾದ್ದಲ್ಲಿ ಆಳುವ ಕಾಂಗ್ರೆಸ್ ಪಕ್ಷಕ್ಕೂ, ಬಂಡವಲದಾರರಿಗೂ ಮಾತ್ರ ಲಾಭವಾಗುತ್ತದೆ. ನಮ್ಮ ದೇಶದಲ್ಲಿ ಬಂಡವಲದಾರ-ಭೂ ಮಾಲಕ ವರ್ಗದ ಆಡಳಿತಕ್ಕೆ ಭದ್ರತೆಕೊಟ್ಟು ಮುಂದುವರಿಸಿದಂತಾಗುತ್ತದೆ. ಅದು ದೇಶದ ಸಮಗ್ರತೆಗೆ, ಸಾರ್ವಭೌಮತ್ವಕ್ಕೆ ಐಕ್ಯತೆಗೆ ಅಪಾಯಕರವಾಗುತ್ತದೆ.

ಆದ್ದರಿಂದ ವಿಚ್ಛಿದ್ರಕಾರಿ ಶಕ್ತಿಗಳನ್ನು ಪ್ರತ್ಯೇಕಿಸಿ ನಾಶಪಡಿಸಲು, ಆಳುವ ಪಕ್ಷದ ಸರ್ವಾಧಿಕಾರಿ ನೀತಿಯನ್ನು ಬಯಲಿಗೆಳೆಯಲು, ಪಂಜಾಬ್-ಕಾಶ್ಮೀರ ಸಮಸ್ಯೆಗಳ ಕುರಿತು ಜನರಿಗೆ ನಿಜ ಸಂಗತಿ ತಿಳಿಸಿ ಹೇಳಲು ಸೆಪ್ಟಂಬರ್ ಇಡೀ ತಿಂಗಳು ರಾಜಕೀಯ ಆಂದೋಲನ ನಡೆಸಬೇಕೆಂದು ರಾಜ್ಯ ಸಮಿತಿ ತೀರ್ಮಾನಿಸಿದೆ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಸಹಕಾರವನ್ನೂ ಪಡೆದು ಇಂದಿರಾ ಗಾಂಧಿಯ, ಕೇಂದ್ರ ಸರಕಾರದ ಜನವಿರೋಧ, ಅಪಾಯಕಾರಿ ನೀತಿಯನ್ನು ಬಯಲಿಗೆಳೆದು ಅದರ ವಿರುದ್ಧ ಜನತೆ ಎದ್ದೇಳುವಂತೆ ಮಾಡಬೇಕೆಂದು ರಾಜ್ಯ ಸಮಿತಿ ಎಲ್ಲ ಘಟಕಗಳಿಗೆ, ಸದಸ್ಯರಿಗೆ ಕರೆ ಕೊಟ್ಟಿದೆ.

ಕಾಶ್ಮೀರದ ವಿಧಾನ ಸಭೆಯಲ್ಲಿ ತನ್ನ ಬಹುಮತ ಪ್ರದರ್ಶಿಸಲು ಅವಕಾಶ ಮಾಡಿಕೊಡದೆ, ಡಾ॥ ಅಬ್ದುಲ್ಲಾ ಸರಕಾರವನ್ನು ಕಿತ್ತೊಗೆದು, ಪಕ್ಷಾಂತರಿಗಳಿಗೆ ಮಂತ್ರಿಮಂಡಲ ರಚಿಸಲು ಅವಕಾಶ ಮಾಡಿ ಕೊಟ್ಟಿರುವುದನ್ನೂ ರಾಜ್ಯ ಸಮಿತಿ ಖಂಡಿಸಿ, ಕಾಶ್ಮೀರದಲ್ಲಿ "ಷಾ" ಸರಕಾರವನ್ನು ವಿಸರ್ಜಿಸಿ, ಕೂಡಲೇ ಚುನಾವಣೆ ನಡೆಸಬೇಕೆಂದು ಒತ್ತಾಯ ಮಾಡಿದೆ

ವಿರೋಧ ಪಕ್ಷಗಳ ಸಲಹೆಗಳನ್ನು ಅಂಗೀಕರಿಸುತ್ತಿದ್ದರೆ, ಸ್ವರ್ಣ ಮಂದಿರಕ್ಕೆ ಸೈನ್ಯ ಕಳುಹಿಸಿ ಸಿಖ್ಖರ ಮನಸ್ಸನ್ನು ನೋಯಿಸುವಂಥ ಕ್ರಮ ತಪ್ಪಿಸಬಹುದಿತ್ತೆಂದೂ ರಾಜ್ಯ ಸಮಿತಿ ಅಭಿಪ್ರಾಯ ವ್ಯಕ್ತ ಮಾಡಿ, ಮಂದಿರದಿಂದ ಸೈನ್ಯವನ್ನು ವಾಪಸ್ ಕರೆಸಿ, ಶಾಂತ ಪರಿಸ್ಥಿತಿಗೆ ಅವಕಾಶ ಮಾಡಿ ಕೊಡಬೇಕೆಂದೂ ಸೂಚಿಸಿದೆ.

ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ಬೆಳೆದು ಬಂದಿರುವ ಅಂದರೆ, ಜನತಾ ಸರಕಾರದ ಮೇಲೆ ಬಿಜೆಪಿಯ ಒತ್ತಾಯ, ಕಾಂಗ್ರೆಯಲ್ಲಿ ಶ್ರೀಕಂಠಯ್ಯ ಪ್ರಕರಣ, ಜನತಾದಲ್ಲಿ 38 ಜನತಾ ಶಾಸಕರ ನಿರ್ಣಯಗಳನ್ನೂ ಹಾಗೆಯೇ ಜನತಾ ಸರಕಾರದ ಆಡಳಿತೆಯ ವೈಖರಿಯನ್ನೂ ಪರಾಮರ್ಶಿಸಿತು.

ತನ್ನ ಸರಕಾರವನ್ನು ಉರುಳಿಸಿಕೊಳ್ಳುವ ಉದ್ದೇಶದಿಂದ ಹೆಗಡೆ ಸರಕಾರ ಬಿಜೆಪಿ ಯವರ ಒತ್ತಾಯಕ್ಕೆ ಮಣಿದು ಹೆಚ್ಚಿನ ಅನುಕೂಲತೆಗಳನ್ನು ಅವರಿಗೆ ಒದಗಿಸುತ್ತಿರುವುದನ್ನು ರಾಜ್ಯ ಸಮಿತಿ ಖಂಡಿಸಿ, ಹೆಗಡೆ ಸರಕಾರದ ಈ ಧೋರಣೆಯಿಂದಾಗಿ ರಾಜ್ಯದಲ್ಲಿ ಮತೀಯ ಶಕ್ತಿಗಳ ಬೆಳವಣಿಗೆಗೆ ಕಾರಣವಾಗುತ್ತದೆಂದೂ, ಬಿಜೆಪಿ ಜೊತೆಗಿನ ಹೆಚ್ಚು ಸಂಬಂಧದಿಂದಾಗಿ ಜನತಾ ಪಕ್ಷ ಮುಸಲ್ಮಾನರ ಇತರ ಹಿಂದುಳಿದವರ ಬೆಂಬಲ ಕಳೆದುಕೊಳ್ಳ ಬೇಕಾಗುತ್ತದೆಂದೂ ಎಚ್ಚರಿಸಿದೆ.

ಭಯ ಪೀಡಿತ ಪ್ರದೇಶಗಳ ಮಸೂದೆಗೆ ಪೊಲಿಟ್ ಬ್ಯೂರೋ ಖಂಡನೆ

ಕೇಂದ್ರ ಸರ್ಕಾರ ಹೊರಡಿಸಿರುವ ಭಯೋತ್ಪಾದನೆ ಪೀಡಿತ ಪ್ರದೇಶ (ವಿಶೇಷ ನ್ಯಾಯಾಲಯಗಳು) ಮಸೂದೆಗೆ ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ತನ್ನ ಬಲವಾದ ಖಂಡನೆಯನ್ನು ವ್ಯಕ್ತಪಡಿಸಿದೆ. ಈ ಮಸೂದೆಯು ಯಾವುದೇ ಪ್ರದೇಶವನ್ನಾದರೂ ಭಯ ಪೀಡಿತ ಪ್ರದೇಶವೆಂದು ಘೋಷಿಸುವ ಮತ್ತು ಅಂಥ ಪ್ರದೇಶಗಳ ಜನರನ್ನು ಮೇಲಿನ ಕೋರ್ಟುಗಳಲ್ಲಿ ಪ್ರಶ್ನಿಸದಂತೆ ಮಾಡಿ, ಸಾರ್ವಜನಿಕ ವಿಚಾರಣೆಯ ಹಕ್ಕನ್ನು ನಿರಾಕರಿಸುವ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ನೀಡುತ್ತದೆ. ಇದರಲ್ಲಿನ ಅಪಾಯಕರ ಅಂಶವೆಂದರೆ ಮಸೂದೆಯಲ್ಲಿ ಪಟ್ಟಿ ಮಾಡಲಾಗಿರುವ ಅಪರಾಧಗಳು ವರ್ಗಗಳ ನಡುವೆ ದ್ವೇಷವನ್ನು ಉಂಟುಮಾಡಿ ಕಾರ್ಮಿಕವರ್ಗದ ಮತ್ತು ದುಡಿಯುವ ಜನತೆಯ ಹೋರಾಟಗಳನ್ನು ಶಿಥಿಲಗೊಳಿಸುತ್ತದೆ.

ರಾಷ್ಟ್ರೀಯ ಭದ್ರತಾ ಕಾಯಿದೆಯಲ್ಲಿ ಇತ್ತೀಚೆಗೆ ಮಾಡಿದ ತಿದ್ದುಪಡಿಗಳ ಹಿನ್ನೆಲೆಯಲ್ಲೇ ಬಂದಿರುವ ಈ ಮಸೂದೆ ಪ್ರಜಾಪ್ರಭುತ್ವ ಹಕ್ಕುಗಳ ಮತ್ತು ನಾಗರಿಕ ಸ್ವಾತಂತ್ರ್ಯದ ಮೇಲೆ ಆಕ್ರಮಣ ನಡೆಸಲು ಕೇಂದ್ರ ಸರ್ಕಾರಕ್ಕೆ ಮತ್ತಷ್ಟು ವಿಸ್ತೃತವಾದ ಅಧಿಕಾರವನ್ನು ನೀಡುತ್ತದೆ.

ಈ ಹಿಂದೆ ಬಂದಂಥ ಇದೇ ರೀತಿಯ ಮಸೂದೆಗಳು ಸಾಮೂಹಿಕ ಚಳುವಳಿ, ಹೋರಾಟಗಳು ಮತ್ತು ವಿರೋಧ ಪಕ್ಷಗಳ ವಿರುದ್ಧವೇ ಬಳಸಲಾಗಿರುವ ಅನುಭವ ನಮ್ಮದಾಗಿರುವಾಗ ಈ ಹೊಸ ಮಸೂದೆಯನ್ನು ಪ್ರತಿಭಟಿಸಿ ಹೋರಾಡಬೇಕೆಂದು ಸಿ. ಪಿ. ಐ. (ಎಂ) ನ ಪೊಲಿಟ್ ಬ್ಯೂರೋ ದೇಶದ ಎಲ್ಲಾ ಪ್ರಜಾಪ್ರಭುತ್ವ ಪ್ರೇಮಿಗಳಿಗೆ ಕರೆ ನೀಡಿದೆ.

ಪಶ್ಚಿಮ ಬಂಗಾಲದ ಎಡರಂಗ ಸರ್ಕಾರದ ಮುಖ್ಯಮಂತ್ರಿ ಜ್ಯೋತಿ ಬಸು ಹಾಗೆಯೇ ತ್ರಿಪುರ ಎಡರಂಗ ಸರಕಾರದ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ ಯವರೂ ಈ ಕರಾಳ ಮಸೂದೆಗೆ ತಮ್ಮ ಸರಕಾರದ ವಿರೋಧ ವ್ಯಕ್ತಪಡಿಸಿದ್ದಾರೆ.

ಪ್ರಜಾಪ್ರಭುತ್ವದ ಸಾವು

ಡಾ॥ ಫರೂಕ್ ಅಬ್ದುಲ್ಲಾರವರ ಜಮ್ಮು—ಕಾಶ್ಮೀರ ಸರಕಾರವನ್ನ ಕಿತ್ತೊಗೆದಿರುವುದು ಸಂವಿದಾನ ವಿರೊಧವಾಗಿದೆಯೆಂದು, ಮತದಾರರ ಅಭಿಪ್ರಾಯವನ್ನು ಅಲ್ಲಗಳೆದಂತಾಗಿದೆಂದೂ ಸಾರಿ ಕೇಂದ್ರ ಸರಕಾರದ ಉದ್ದೇಶ ಪೂರಿತ ಪ್ರಜಾಪ್ರಭುತ್ವ ವಿರೋಧ ಕ್ರಮವನ್ನು ಜನತೆ ಪ್ರತಿಭಟಿಸಬೇಕೆಂದೂ, ಕಾಶ್ಮೀರದ ಗವರ್ನರನ್ನು ತೆಗೆದು ಹಾಕಬೇಕೆಂದೂ "ಷಾ" ಮಂತ್ರಿಮಂಡಲವನ್ನು ಕಿತ್ತೊಗೆಯಬೇಕೆಂದೂ ಶಾಸನ ಸಭೆಗೆ ಕೂಡಲೇ ಚುನಾವಣೆ ನಡೆಸಬೇಕೆಂದೂ ಒತ್ತಾಯಿಸಲು ಚಳುವಳಿ ಹೂಡಬೇಕೆಂದು ಜುಲೈ 11 ರಂದು ದಿಲ್ಲಿಯಲ್ಲಿ ಸಮಾವೇಶಗೊಂಡಿದ್ದ 19 ವಿರೊಧ ಪಕ್ಷಗಳ ಸಭೆ ಕರೆ ನೀಡಿದೆ. ಈ ಸಭೆಯಲ್ಲಿ ಬಿ. ಜೆ. ಪಿ ಮತ್ತು ಲೋಕದಳದ ಹಿರಿಯ-ಮುಖಂಡರು ಪಾಲ್ಗೊಂಡಿದ್ದರು.

ಕಾಶ್ಮೀರದಲ್ಲಿ ಪಕ್ಷಾಂತರದ ಮೇಲೆ ಪ್ರತಿಬಂಧ ಹೇರುವಾಗ ಪಕ್ಷಾಂತರಿಯಾದವರು ಶಾಸನ ಸಭೆಯ, ಕೌನ್ಸಿಲ್ಲಿನ ಸದಸ್ಯತ್ವವನ್ನು ಕಳೆದುಕೊಂಡಿರುವಾಗ ಅಂಥವರಿಗೆ ಸರಕಾರ ರಚಿಸಲು ಅವಕಾಶ ಮಾಡಿಕೊಟ್ಟ ಗವರ್ನರರ ಕ್ರಮ ಸಂವಿಧಾನಕ್ಕೆ ವಿರುದ್ಧವಾಗಿದೆಂದು ಕೇಂದ್ರದ ಆದೇಶದಂತೆ ವರ್ತಿಸಿ ಕಾಶ್ಮೀರದ ಜನತೆಯ ನಿರ್ಣಯಕ್ಕೆ ಅಡ್ಡಿ ಉಂಟುಮಾಡಿದ್ದಾರೆಂದೂ ವಿರೋಧ ಪಕ್ಷಗಳ ನಿರ್ಣಯ ಸಾರಿದೆ.

1968 ರಲ್ಲಿ ಸೇರಿದ್ದ ವಿಧಾನಸಭಾಧ್ಯಕ್ಷರ ಸಮಾವೇಶ ಹಾಗೆಯೆ 1971 ರಲ್ಲಿ ವಿ. ವಿ. ಗಿರಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಗವರ್ನರರ ಸಭೆಯಲ್ಲಿ, ಒಬ್ಬ ಮುಖ್ಯ ಮಂತ್ರಿಯ ಬಹುಮತವನ್ನು ಶಾಸನ ಸಭೆಯಲ್ಲಿ ನಿರ್ಧರಿಸಬೇಕಲ್ಲದೆ, ಗವರ್ನರರ ಬಂಗ್ಲೆಯಲ್ಲಲ್ಲೆಂಬ ನಿರ್ಣಯ ಕೈಗೊಂಡಿರುವಾಗ ಕಾಶ್ಮೀರದ ಗವರ್ನರರ ಕ್ರಮ ಈ ನಿರ್ಣಯಕ್ಕೆ ವಿರುದ್ಧವಾಗಿದೆಂದೂ, ಕಾಂಗ್ರೆಯೇತರ ಸರಕಾರಗಳನ್ನು ಅಭದ್ರಗೊಳಿಸುವ ಇಂದಿರಾ ನೀತಿಗನುಸಾರವಾಗಿಯೇ ಈ ಗವರ್ನರ ವರ್ತಿಸಿದ್ದಾರೆಂದೂ ಸಮಾವೇಶ ಆರೋಪಿಸಿದೆ.

ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂದೂ, ಭಾರತ ದೇಶದ ಜನರೊಡನೆ ತಮ್ಮ ಸಂಬಂಧ ಇನ್ನಷ್ಟು ಬಿಗಿಗೊಳ್ಳುವಂತೆ ಮಾಡುತ್ತೇವೆಂಬ ದೃಢನಿರ್ಧಾರ ಕೈಗೊಂಡಿರುವ ಡಾ. ಅಬ್ದುಲ್ಲಾ ನ್ಯಾಶನಲ್ ಕಾನ್ಫರೆನ್ಸ್ ಹಾಗೂ ಕಾಶ್ಮೀರದ ಜನತೆಯನ್ನು ವಿರೋಧ ಪಕ್ಷಗಳ ಸಮಾವೇಶ ಸ್ವಾಗತಿಸಿದೆ.

— ಎನ್ಕೆ

ಕರ್ನಾಟಕ ರಾಜ್ಯದಲ್ಲಿ

ಕರ್ನಾಟಕ ರಾಜ್ಯದಲ್ಲಿ ಗೊಂದಲ

ಬಂಡವಾಳಶಾಹಿ ಪಕ್ಷಗಳಲ್ಲಿ "ಷಾ"ಗಳು ಹುಟ್ಟಿಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲೆಂದು ಹೋದ ವಾರವೇ ನಾನು ಹೇಳಿದ್ದೆ. ಇಂದಿರಾ ಗಾಂಧಿ, ಕಾಶ್ಮೀರದಂತೆ ಕರ್ನಾಟಕದಲ್ಲಿ "ಷಾ" ಗಳನ್ನು ಹುಟ್ಟಿಸಿದ್ದಾರೋ ಅಥವಾ "ಷಾ" ಮರಿಗಳನ್ನು ಹುಟ್ಟಿಸಲು ಹೊರಟಿದ್ದಾರೋ ಎಂದು ಈಗಲೇ ಹೇಳುವುದು ಕಷ್ಟ. ಗರ್ಭದಲ್ಲಿರುವ ಜೀವ ಬೀಜ ಮಗುವಾಗಿ ಹೊರಬೀಳಬೇಕಾದರೆ ಕನಿಷ್ಟ ಒಂಭತ್ತು ತಿಂಗಳಾದರೂ ಬೇಕು. ಆದರೆ ಬಂಡವಾಳಶಾಹಿ ಸಮಾಜದ ಸ್ಪಂದನ ಅಳತೆಮೀರಿ ನಡೆದಿರುವಾಗ ಜೀವ ಕೋಶ ಯಾವಾಗ ಒಡೆದು ಹೋಗುತ್ತದೋ ಎಂದು ಹೇಳುವುದೇ ಕಷ್ಟ. ಅಂಥ ಕಂಗಾಲು ಪರಿಸ್ಥಿತಿಯಲ್ಲಿದೆ ಕರ್ನಾಟಕ ರಾಜ್ಯದ ಸ್ಥಿತಿಗತಿ.

ಪಾಟೀಲ್-ಹೆಗಡೆ ಪೈಪೋಟಿ

ಉತ್ತರ ಕರ್ನಾಟಕದಲ್ಲಿ "ಹರಿದೇಶಿ-ನಾಗೇಶಿ" ಹಾಡು ಬಹಳ ಪ್ರಸಿದ್ಧ. ಗಂಡಸು ಹೆಂಗಸನ್ನೂ, ಹೆಂಗಸು ಗಂಡಸನ್ನೂ ಆಹ್ವಾನಿಸುವ ರೀತಿಯಲ್ಲಿ ಹಾಡು ಹಾಡುತ್ತಾರೆ. ಆ ರೀತಿಯಲ್ಲಿ ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ ಕೆ. ಎಚ್. ಪಾಟೀಲ್ ಮತ್ತು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಇವರೊಳಗೆ ಹರಿದೇಶಿ-ನಾಗೇಶಿ ಹಾಡು ನಡೆದಿರುವುದು ರಾಜಕೀಯ ರಂಗದಲ್ಲಿ ಶೋಭಿಸುವಂಥದ್ದಲ್ಲವೆಂದೇ ಹೇಳಬೇಕಾಗುತ್ತದೆ. ಜನತಾ ಪಕ್ಷದ 15 ಶಾಸಕರು ತನ್ನ ಕಿಸೆಯಲ್ಲಿದ್ದಾರೆಂಬ ಪಾಟೀಲರ ಹೇಳಿಕೆಗೆ ಉತ್ತರವಾಗಿ ರಾಮಕೃಷ್ಣ ಹೆಗಡೆಯವರು ಕಾಂಗ್ರೆಸ್ಸಿನ 20 ಶಾಸಕರು ತನ್ನ ಬಲೆಗೆ ಬಿದ್ದಿದ್ದಾರೆಂದು ಹೇಳುವುದು ಬಂಡವಾಳಶಾಹಿ ರಾಜಕೀಯ ಮುಖಂಡರಿಗಷ್ಟೇ ಶೋಭಿಸುತ್ತದೆ. ಜನತಾ ಪಕ್ಷದ ಮುಖ್ಯಮಂತ್ರಿಯಾಗಿರುವ ಹೆಗಡೆಯವರು ಕಾಂಗ್ರೆಸ್ ಅಧ್ಯಕ್ಷ ಪಾಟೀಲರಷ್ಟು ಕೀಳ್ಮಟ್ಟಕ್ಕೆ ಜಾರಿ ಬೀಳದೆ, ಕರ್ನಾಟಕ ಒಂದೇ ರಾಜ್ಯದಲ್ಲಿ ಜನತಾ ಪಕ್ಷ ಅಧಿಕಾರದಲ್ಲಿರುವ, ತನ್ನ ಪಕ್ಷದ ನೀತಿ-ನಿರೂಪಣೆಗಳನ್ನು ಮೇಲ್ಮಟ್ಟದಲ್ಲಿ ಉಳಿಸಿ ಇತರ ಪಕ್ಷಗಳಿಗೆ ಮಾದರಿಯಾಗುವ ರೀತಿಯಲ್ಲಿ ವರ್ತಿಸುವುದು ಯೋಗ್ಯವಾಗಿದೆ. ಇಲ್ಲವಾದರೆ ರಾಜಕೀಯ ನೀತಿಯನ್ನು ಗಾಳಿಗೆ ತೂರಿದಂತಾಗುತ್ತದೆ.

ಜನತಾ ಶಾಸಕಾಂಗ ಪಕ್ಷದಲ್ಲಿ ಗೊಂದಲ

ಇಂದಿರಾ ಗಾಂಧಿಯವರು ಕಾಶ್ಮೀರದ ಡಾ|| ಅಬ್ದುಲ್ಲಾ ಅವರ ಬಹುಮತವಿದ್ದ ಸರಕಾರವನ್ನು ಉರುಳಿಸಿರುವುದರಿಂದ ಸ್ಫೂರ್ತಿಗೊಂಡ ಕಾಂಗ್ರೆಸ್ ಮುಖಂಡರು ಕರ್ನಾಟಕದಲ್ಲೂ ಹೆಗಡೆ ಸರಕಾರ ಅದೇ ಗತಿ ಕಾಣಬಹುದೆಂಬ ಆಸೆಯಿಂದ ತಮ್ಮ ಆಂತರಿಕ ಜಗಳಗಳನ್ನೆಲ್ಲ ಬದಿಗೊತ್ತಿ "ಮೊದಲು ಹೆಗಡೆಯವರನ್ನು ಜಾಡಿಸೋಣ, ಆನಂತರ ಜಗಳಾಡೋಣ" ಎಂಬ ನಿರ್ಧಾರಕ್ಕೆ ಬಂದಂತೆ ಕಂಡು ಬರುತ್ತದೆ. ಶ್ರೀಕಂಠಯ್ಯನವರು ತಮ್ಮ 35-40 ಬೆಂಬಲಿಗರೊಂದಿಗೆ ರಾಜ್ಯ ಕಾಂಗ್ರೆಸ್ ಮುಖಂಡತ್ವದ ವಿರುದ್ಧ ದಿಲ್ಲಿ ರಾಣಿಯ ಹತ್ತಿರ ದೂರು ತಗೊಂಡು ಹೋಗಿದ್ದರು. ಶ್ರೀಕಂಠಯ್ಯನವರ ವಿರುದ್ಧ ಶಿಸ್ತು ಭಂಗ ಕ್ರಮ ತೆಗೆದುಕೊಳ್ಳಬೇಕೆಂದು ಮೊಯಿಲಿ ಗುಂಪಿನವರು ಪ್ರಯತ್ನ ನಡೆಸುತ್ತಿದ್ದಾಗಲೇ, ಕೆ. ಎಚ್. ಪಾಟೀಲ ಶ್ರೀಕಂಠಯ್ಯ ಇಬ್ಬರೂ ಸೇರಿ ತಾತ್ಕಾಲಿಕ ಒಪ್ಪಂದ ಮಾಡಿಕೊಂಡಂತೆ ಕಂಡು ಬರುತ್ತದೆ. ಈ ಸಂಧಿಗ್ಧ ಸಮಯದಲ್ಲಿ ಅಂಥ ಒಪ್ಪಂದದಿಂದ ತನಗೇನೂ ಹಾನಿಯಾಗಲಿಕ್ಕಿಲ್ಲೆಂದು ಮೊಯಿಲಿಯವರೂ ತಿಳಿದುಕೊಂಡು ಸದ್ಯಕ್ಕೆ ಶ್ರೀಕಂಠಯ್ಯ ಪ್ರಕರಣವನ್ನು "ಮುಂದೆ ವಿಚಾರ ಮಾಡತಕ್ಕ ಫ್ಯಾಲ್"ನಲ್ಲಿ ಹಾಕಿದ್ದಾರಂತೆ. ಇದಕ್ಕೇನು ಕಾರಣ ಗೊತ್ತೇ? ಜನತಾ ಶಾಸಕಾಂಗ ಪಕ್ಷದಲ್ಲೆದ್ದ ಬಿರುಗಾಳಿ ಕಾಂಗ್ರೆಸ್ ಭಿನ್ನಮತೀಯರೆಲ್ಲ ಒಂದೆಡೆ ಸೇರಿ ಯಾರೂ ಬಿಡಿಸಲಾರದ ಭದ್ರವಾದ ಆಲಿಂಗನದಲ್ಲಿ ಸಿಕ್ಕಿಕೊಳ್ಳುವಂತೆ ಮಾಡಿದೆ. ಸಚಿವರೆಲ್ಲ ರಾಜೀನಾಮೆ ಕೊಡಬೇಕೆಂದು 38 ಶಾಸಕರ ಒತ್ತಾಯವೆಂಬ ಶಿರೋನಾಮೆ ಪತ್ರಿಕೆಗಳಲ್ಲಿ ಪ್ರಕಟವಾದ ಕೂಡಲೇ ಪಾಟೀಲ, ಮೊಯಿಲಿ, ಗುಂಡೂರಾವ್, ಶ್ರೀಕಂಠಯ್ಯನವರೆಲ್ಲ ತೆಕ್ಕೆ ಬಿದ್ದು ಬೆನ್ನು-ಬಾಯಿ ಸವರಿಸಿಕೊಂಡರಂತೆ. ರಾಮಕೃಷ್ಣ ಹೆಗಡೆಯವರಿಗೆ ಸಂಪುಟ ಪುನರ್ರಚಿಸಲು ಮುಕ್ತ ಅವಕಾಶ ಮಾಡಿಕೊಡುವುದೇ ಇದರ ಉದ್ದೇಶವಂತೆ. ನಾಲ್ವರು ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆಂಬ ಸುದ್ದಿ ಪ್ರಕಟವಾದ 24 ಗಂಟೆಯೊಳಗೆ ಎಲ್ಲ ಮಂತ್ರಿಗಳೂ ತಮ್ಮ ರಾಜೀನಾಮೆಯನ್ನು ಮುಖ್ಯಮಂತ್ರಿಯವರಿಗೊಪ್ಪಿಸಿದ್ದಾರೆಂಬ ವದಂತಿ ಇದೆ. ಕ್ಯಾಬಿನೆಟ್ ಮತ್ತು ರಾಜ್ಯ ಶಾಖೆ ಮಂತ್ರಿಗಳೆಲ್ಲ ತಾ|| 17 ರ ಮಂತ್ರಿ ಮಂಡಲದ ಸಭೆಗೆ ಹಾಜರಿರಬೇಕೆಂಬ ಆದೇಶ ಕಳುಹಿಸಿದ್ದರೂ ಕೂಡ ಚಂದ್ರಪ್ರಭಾ ಅರಸ್ ಸಭೆಗೆ ಹಾಜರಾಗಲಿಲ್ಲ. ತಮ್ಮ ರಾಜೀನಾಮೆಯನ್ನೂ ಕೊಟ್ಟಿಲ್ಲವಂತೆ.

ಅಜೀಜ್ ಸೇಠ್, ಚಂದ್ರಪ್ರಭಾ ಅರಸ್ ಮೊದಲಾದ ಮಂತ್ರಿಗಳ ಕುರಿತು ಸಾಕಷ್ಟು ಆರೋಪಗಳು ಕೇಳಿ ಬರುತ್ತಿದ್ದವು. ಅಲ್ಲದೆ ಹಿಂದುಳಿದವರಿಗೆ ಸಾಕಷ್ಟು ಪ್ರಾತಿನಿಧ್ಯ ಮಂತ್ರಿ ಮಂಡಲದಲ್ಲಿಲ್ಲೆಂಬ ಅಸಮಾಧಾನದ ಹೊಗೆಯು ಕಾಣ ಬರುತ್ತಿತ್ತು. ಒಂದಿಲ್ಲೊಂದು ಅಧಿಕಾರ ಸ್ಥಾನ ಪಡೆಯುವ ಸಲುವಾಗಿಯೇ ಜನತಾ ಪಕ್ಷದಿಂದ ಚುನಾವಣೆಗೆ ನಿಂತು ಆರಿಸಿ ಬಂದಿರುವ ಹಲವಾರು ಶಾಸಕರಲ್ಲಿ ಅಸಮಾಧಾನ ತುಂಬಿ ತುಳುಕುತ್ತಿದೆಂಬ ಸಂಗತಿ, ಹಾಗೆಯೇ ಇವರನ್ನು ಸಮಾಧಾನ ಪಡಿಸುವ ಸಲುವಾಗಿ ಮಂತ್ರಿಮಂಡಲ ವಿಸ್ತರಿಸಲಾಗುವುದೆಂಬ ಊಹೆಗಳು ಕೆಲವು ತಿಂಗಳಿಂದ ಬೆಳಕು ಕಾಣುತ್ತಿದ್ದವು. ತಮ್ಮ ಪಕ್ಷದಲ್ಲಿರುವ ಸಮಸ್ಯೆಗಳು ಮಂತ್ರಿ ಮಂಡಲದ ವಿಸ್ತರಣೆಯಿಂದ ಮಾತ್ರ ಬಗೆಹರಿಯಲಾರದೆಂಬ ಗುಟ್ಟನ್ನು ತಿಳಿದಿರುವ ಹೆಗಡೆ ಇಷ್ಟು ದಿವಸ ಆ ಕಾರ್ಯವನ್ನು ಮುಂದೆ ಹಾಕುತ್ತ ಬಂದಿದ್ದರು. ಈಗ ಕಾಶ್ಮೀರದಲ್ಲಿ ಫರೂಕ್ ಅಬ್ದುಲ್ಲಾ ಸರಕಾರದ ವಿಸರ್ಜನೆ, ಮುಂಬರುವ ಲೋಕಸಭಾ ಚುನಾವಣೆಗಳನ್ನೆಲ್ಲ ದೃಷ್ಟಿಯಲ್ಲಿಟ್ಟುಕೊಂಡು, ರಾಮಕೃಷ್ಣ ಹೆಗಡೆಯವರ ಕೈಬಲ ಗೊಳಿಸುವ, ಜನತಾ ಸರಕಾರದ ಪ್ರತಿಷ್ಠೆ ಹೆಚ್ಚಿಸುವ ದೃಷ್ಟಿಯಿಂದ ಎಲ್ಲ ಮಂತ್ರಿಗಳೂ ರಾಜೀನಾಮೆ ಕೊಡಬೇಕೆಂಬ ಬೇಡಿಕೆಯನ್ನು 38 ಜನತಾ ಶಾಸಕರು ಮಂಡಿಸಿ ಕರ್ನಾಟಕದ ರಾಜಕೀಯದಲ್ಲಿ ಬಿರುಗಾಳಿ ಎಬ್ಬಿಸಿದ್ದಾರೆ. ಕಾಂಗ್ರೆಸ್ಸಿನವರೆಲ್ಲ ತನ್ನ ಭಿನ್ನ ಮತಗಳನ್ನೆಲ್ಲ ಬಿಟ್ಟು ಒಗ್ಗಟ್ಟಾಗುವಂತೆ ಮಾಡಿದ್ದಾರೆ. ಮಂತ್ರಿಗಳಾಗುವ ಇಚ್ಛೆ ತಮಗಿಲ್ಲೆಂದು ಬೈರೇಗೌಡನ ಗುಂಪಿನವರೆಂದು ಹೇಳಲಾಗುವ ಶಾಸಕರು ಅಭಿಪ್ರಾಯ ವ್ಯಕ್ತ ಮಾಡುತ್ತಿದ್ದರೂ, ಎಲ್ಲ ಪ್ರದೇಶಕ್ಕೆ ಎಲ್ಲ ಜಾತಿ, ಪಂಗಡದವರಿಗೆ ಮಂತ್ರಿ ಮಂಡಲದಲ್ಲಿ ಸ್ಥಾನ ಸಿಗಬೇಕೆಂಬ ಇಚ್ಛೆ ವ್ಯಕ್ತ ಮಾಡಿರುವುದನ್ನು ನೋಡುವಾಗ ಇವರು ದ್ವಿಮುಖ ಧೋರಣೆ ಅನುಸರಿಸುತ್ತಿದ್ದಾರೋ ಎಂಬ ಸಂಶಯ ಉಂಟಾಗುತ್ತದೆ.

ಈ ಗುಂಪಿನ ನಿಲುವೆ ಸರಿಯಲ್ಲ

ಜನತಾ ಸರಕಾರವನ್ನು ಉರುಳಿಸುವ ಸತತಪ್ರಯತ್ನ ಹೆಗ್ಗಡೆ ಅಧಿಕಾರಕ್ಕೆ ಬಂದಂದಿನಿಂದಲೂ ಇದೆ. ಕಾಂಗ್ರೆಸ್ಸೇತರ ಸರಕಾರಗಳನ್ನು ರುಳಿಸುವ ಹೊಂಚಿನಲ್ಲಿ ಕಾಶ್ಮೀರದ ಡಾ|ಅಬ್ದುಲ್ಲಾ ಸರಕಾರವನ್ನು ಉರುಳಿಸಿರುವುದು ನಾಂದಿಯಾಗಬಹುದೇ ಎಂಬ ಸಂಶಯ ಎಲ್ಲರಲ್ಲಿ ಮೂಡಿಬಂದಿದೆ. ಮತ್ತೊಂದು ಕಡೆಯಲ್ಲಿ ಹೆಚ್ಚು ಅಧಿಕಾರ, ಮಂತ್ರಿ ಮಂಡಲದಲ್ಲಿ ಸ್ಥಾನ ಪಡೆಯಲು ಬಿ. ಜೆ. ಪಿ. ಮುಖಂಡತ್ವ ಎಲ್ಲಾ ತರದ ಕುತಂತ್ರ-ಒತ್ತಡಗಳನ್ನು ಮಾಡುತ್ತಿದೆ. ಮೊಟಕನೆಯದಾಗಿ ಬಿ. ಜೆ. ಪಿ. ಯವರಿಗೆ ಈಗಾಗಲೇ 5 ಅಧ್ಯಕ್ಷೀಯ ಪದವಿಗಳನ್ನು, ಕಮಿಟಿಗಳಲ್ಲಿ ಸದಸ್ಯತ್ವವನ್ನೂ ನೀಡಿದ್ದಕ್ಕೆ ಜನತಾ ಪಕ್ಷದಲ್ಲಿ ಅಸಮಾಧಾನ ಹೆಚ್ಚಾಗುತ್ತಿದೆ. ಹರಿಜನ ಗಿರಿಜನರನ್ನು ಕಡೆಗಣಿಸಲಾಗುತ್ತಿದೆಯೆಂದೂ, ಅಧಿಕಾರಿ ವರ್ಗ ಜನತಾ ಪಕ್ಷದ ಕಾರ್ಯಕ್ರಮಗಳನ್ನು ಸರಿಯಾಗಿ ಅನುಷ್ಠಾನದಲ್ಲಿ ತರುತ್ತಿಲ್ಲವೆಂದೂ ದಿನನಿತ್ಯ ಆರೋಪಗಳು ಕೇಳಿ ಬರುತ್ತಿವೆ. ತನ್ನ ಸರಕಾರ ಉಳಿಸಿಕೊಳ್ಳುವ ಸಲುವಾಗಿ ರಾಮಕೃಷ್ಣಹೆಗ್ಗಡೆಯವರು ಬಿ. ಜೆ ಪಿ. ಯ ಒತ್ತಡಕ್ಕೆ ಬಲಿಯಾಗಿ ಅವರ ಜೊತೆಯಲ್ಲಿ ಜಿಲ್ಲಾ ಮಟ್ಟದ ಸಲಹಾ ಸಮಿತಿಗಳನ್ನು ನೇಮಿಸಿಕೊಳ್ಳುವ ವಿಚಾರದಿಂದ ಬಿ. ಜೆ. ಪಿ ಜೊತೆಯಲ್ಲಿ ಈ ರೀತಿಯ ಹೊಂದಾಣಿಕೆಯಿಂದ ಅಲ್ಪಮತಸ್ಥರನ್ನು, ಹಿಂದುಳಿದವರನ್ನು ಎದುರು ಹಾಕಿಕೊಂಡಂತಾಗುತ್ತದೆಂದು ಮನವರಿಕೆ ಮಾಡಿಕೊಂಡ ಕೆಲವು ಜನತಾ ಮುಖಂಡರೂ ಇದ್ದಾರೆ.

ಬಿ.ಜೆ.ಪಿ. ಗೆ ಜೊತೆಯಲ್ಲಿ ಸರಕಾರ ನಡೆಸುವ, ಅವರಿಗೆ ಅತಿ ಹೆಚ್ಚು ಸ್ಥಾನಗಳನ್ನು ಬಿಟ್ಟುಕೊಡುವ, ಜಿಲ್ಲಾ ಮಟ್ಟದಲ್ಲಿ ಜನತಾ–ಬಿ. ಜೆ.ಪಿ ಕಮಿಟಿಗಳನ್ನು ನೇಮಿಸುವ ನಿಲುವೆಯನ್ನು ಭಾರತ ಕಮ್ಯುನಿಸ್ಟ್ ಪಾರ್ಟಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಗಳೆರಡೂ ವಿರೋಧಿಸಿವೆ.

ಇಂಥ ಒಂದು ಗೊಂದಲಮಯ ಪರಿಸ್ಥಿತಿ ರಾಜ್ಯದಲ್ಲಿರುವಾಗ ಜನತಾ ಪಕ್ಷದ ಶಾಸಕರೇ ಗುಂಪುಗಟ್ಟಿ ಬಹಿರಂಗವಾಗಿಯೇ ಇಂಥಕ್ರಮ ಕೈಗೊಂಡಿರುವುದು ನಿಜವಾಗಿಯೂ ಇಂದಿರಾ ಕಾಂಗ್ರೆಸ್ಸಿನ ಬಲವರ್ಧನೆಗೆ, ಪ್ರತಿಗಾಮಿ ಶಕ್ತಿಗಳಿಗೆ, ಅನುಕೂಲಕರವಾಗಿದೆಂದು ಹೇಳಲೇಬೇಕಾಗುತ್ತವೆ.

ಕರ್ನಾಟಕದಲ್ಲಿ ಜನತಾ ಸರಕಾರ ಉಳಿಯಬೇಕಾದರೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬಲಗೊಳ್ಳಬೇಕಾದರೆ, ಕಾಂಗ್ರೆಸ್ ಕುತಂತ್ರಗಳೆಲ್ಲಾ ನಾಶವಾಗಬೇಕಾದರೆ, ಅಧಿಕಾರಿವರ್ಗ ತಮ್ಮ ನಿಲುವೆಯಲ್ಲಿ ಬದಲಾವಣೆ ಮಾಡಿಕೊಂಡು ಆಡಳಿತ ನಡೆಸಬೇಕಾದರೆ, ಬೈರೇಗೌಡರಂತವರು ಜನತಾ ಪಾರ್ಟಿಯಲ್ಲಿ ಗೊಂದಲವೆಬ್ಬಿಸುವುದನ್ನು ಕೂಡಲೇ ನಿಲ್ಲಿಸುವುದು ಯೋಗ್ಯವೆಂದೂ ಏನೇ ಬರಲಿ ತಾವೆಲ್ಲಾ ಸಿ. ಪಿ. ಐ- ಸಿ.ಪಿ ಐ[ಎಂ]ಜೊತೆಯಲ್ಲಿ ಭದ್ರವಾದ ಜನಹಿತಕರವಾದ ಆಡಳಿತ ನಡೆಸಿಕೊಂಡು ಹೋಗಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿಯೂ ಈ ಮೂರು ಪಕ್ಷಗಳ ಹಾಗೆಯೇ ಪ್ರಜಾಪ್ರಭುತ್ವವಾದಿ ಪುರೋಗಾಮಿ ಗುಂಪು ಮತ್ತು ಜನರ ಜೊತೆಲ್ಲಿಯು ಹೊಂದಾಣಿಕೆ ಮಾಡಿಕೊಂಡು, ಇಂದಿರಾ ಕಾಂಗ್ರೆಸ್ಸಿಗೂ ಬಿ. ಜೆ.ಪಿ ಗೂ ಸರಿಯಾದ ಉತ್ತರ ಕೊಡುತ್ತೇವೆಂಬ ಧೃಡ ನಿರ್ಧಾರ ಕೈಗೊಳ್ಳುವುದು ಅಗತ್ಯವೆಂದು ನಾವು ಒತ್ತಿಹೇಳಬಿಚ್ಛಿಸುತ್ತೇವೆ. ಜನತಾ ಪಕ್ಷದ ಶಾಸಕರು ಇಂದಿರಾ ಕಾಂಗ್ರೆಸ್ಸಿನ ಬಲೆಗೆ ಬೀಳಬಾರದೆಂದು ನಮ್ಮ ದೃಢವಾದ ಅಪೇಕ್ಷೆ. ಆದರೆ ತಮ್ಮ ಒಳಜಗಳದಿಂದಾಗಿ ಆಕೆಗೆ ಅವಕಾಶ ಮಾಡಿಕೊಟ್ಟಿದ್ದಾದರೆ ಕರ್ನಾಟಕದ ಜನತೆ ಅಂಥ ಶಾಸಕರನ್ನು ಕ್ಷಮಿಸಲಾರರೆಂದು ನಾವು ಸ್ಪಷ್ಟಪಡಿಸಬಿಚ್ಛಿಸುತ್ತೇವೆ. ಎರಡೂ ಕಮ್ಯುನಿಸ್ಟ್ ಪಾರ್ಟಿಗಳೂ ಪ್ರಜಾಪ್ರಭುತ್ವಶಕ್ತಿಗಳು ಜಾಗೃತವಾಗಿ ಹೋರಾಟ ಮುಂದುವರಿಸುವುದು ಈ ಸಂದಿಗ್ಧ ಸಮಯದಲ್ಲಿ ಅತ್ಯಗತ್ಯ.

ಡಿ. ವೈ. ಎಫ್. ಐ. ಅಧ್ಯಯನ ಶಿಬಿರ

1984 ಜುಲೈ 14-15 ರಂದು ಎರಡು ದಿನಗಳ ಅಧ್ಯಯನ ಶಿಬಿರವನ್ನು ಬಳ್ಳಾರಿ ಜಿಲ್ಲಾ ಡಿ. ವೈ. ಎಫ್. ಐ. ಘಟಕವು ಹೊಸಪೇಟೆಯಲ್ಲಿ ಏರ್ಪಡಿಸಿತ್ತು.

40 ಜನ ಪ್ರತಿನಿಧಿಗಳು ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದರು.

ಮೊದಲ ಅಧಿವೇಶನದಲ್ಲಿ ಡಿ. ವೈ. ಎಫ್. ಐ. ರಾಜ್ಯ ಕಾರ್ಯದರ್ಶಿ ಶ್ರೀ ಎಸ್. ಶಿವರಾಂ ಅವರು ಸಂಘಟನೆಯ ಧ್ಯೇಯೋದ್ದೇಶಗಳು ಮತ್ತು ಎರಡನೇ ಕ್ಯಾಲಿಕಟ್ ರಾಷ್ಟ್ರ ಸಮ್ಮೇಳನ ಹಾಗೂ ನಿರ್ಣಯಗಳನ್ನು ಹೇಳಿದರು.

ಮುಖ್ಯ ಉಪನ್ಯಾಸಕರಾಗಿ ಬಂದಿದ್ದ ಶ್ರೀ ಎ. ಎಸ್. ಆಚಾರ್ಯ ಅವರು ದ್ವಂದ್ವಾತ್ಮಕ ಹಾಗೂ ಚಾರಿತ್ರಿಕ ಭೌತವಾದದ ಬಗ್ಗೆ ಅತ್ಯಂತ ಸರಳ ರೀತಿಯಲ್ಲಿ ವಿವರಿಸಿದರು.

ಅಧ್ಯಾಪಕರಾದ ಶ್ರೀ ಎಸ್. ಎಸ್. ಹಿರೇಮಠ ಅವರು ಜನತೆಯ ಸಂಸ್ಕೃತಿ ಎಂಬ ವಿಷಯದ ಮೇಲೆ ಮಾತನಾಡಿದರು.

ವಾಸವೀ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಭೀಮಸೇನಾಚಾರ್ ಅವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಂಚಾಲಕ ಶ್ರೀ ಜಂಬಯ್ಯನಾಯಕ ಅವರು ಸ್ವಾಗತಿಸಿದರು. ಶ್ರೀ ತಾಯಪ್ಪನಾಯಕ ಅವರು ವಂದಿಸಿದರು.

ಮಹಿಷಿ ವರದಿ - ಕುರುಡು ಭಾಷಾಭಿಮಾನದ ಪ್ರತೀಕ

ಕರ್ನಾಟಕದಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರ ನೇತೃತ್ವದಲ್ಲಿರುವ ಜನತಾ ಸರ್ಕಾರವು ಕನ್ನಡಿಗರಿಗೆ, ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲಿ ಕೆಲಸವನ್ನು ಕಾದಿರಿಸುವ ಅವಕಾಶಗಳ ಬಗ್ಗೆ ಸರೋಜಿನಿ ಮಹಿಷಿ ಸಮಿತಿಯು ಮಾಡಿರುವ ಶಿಫಾರಸ್ಸುಗಳ ವರದಿಯನ್ನು ಒಪ್ಪುವ ತೀರ್ಮಾನವು, ಒಟ್ಟಾಗಿ ಹೇಳುವುದಾದರೆ ಅದು ವಿಸ್ಮಯಕರ. ಈ ಶಿಫಾರಸ್ಸುಗಳು ಅಂತಿಮವಾಗಿ ಎರಡು ಅಪಾಯಕಾರಿಯಾದ ವಿಚ್ಛಿದ್ರಕಾರಿ ಬೇಡಿಕೆಗಳಿಗಿಳಿಯುತ್ತವೆ. ಒಂದು, ಕರ್ನಾಟಕದಲ್ಲಿರುವ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆ ಮತ್ತು ವಾಣಿಜ್ಯ ಉದ್ದಿಮೆಗಳಲ್ಲಿ ಕನ್ನಡಿಗರಿಗೆ ಶೇಕಡ 80 ಭಾಗ ಕೆಲಸವನ್ನು ಒದಗಿಸುವ ಖಾತರಿಯನ್ನು ಕೊಡಬೇಕು, ಇನ್ನೊಂದು ಈ ಉದ್ದಿಮೆಗಳಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುವುದಕ್ಕೆ ಕನ್ನಡ ತಿಳಿದಿರಬೇಕೆಂಬ ಷರತ್ತನ್ನು ಹಾಕಬೇಕು ಈ ಎರಡು ಅಂಶಗಳೂ ಭಾರತದ ಒಗ್ಗಟ್ಟನ್ನು ಸಡಿಲಗೊಳಿಸುವ ಮತ್ತು ಭಾರತದ ಪ್ರಜೆಯ ಪೌರತ್ವವನ್ನು ನಾಶಪಡಿಸುವ ಅಂಥ ಸ್ವದೇಶ ಪ್ರೇಮದ ಮತ್ತು ಪ್ರಾಂತೀಯತೆಯ ಎಲ್ಲ ಅಪಾಯಗಳನ್ನೊಳಗೊಂಡ ಅಂಶಗಳಾಗುತ್ತವೆ.

ಎಲ್ಲ ರಾಜ್ಯಗಳು ಈ ಧೋರಣೆಯನ್ನು ಅನುಸರಿಸುವುದಾದಲ್ಲಿ ಭಾರತ ಒಕ್ಕೂಟವು ಒಂದು ದೇಶವಾಗಿ ಮತ್ತು ಒಂದು ಪ್ರಭುತ್ವವಾಗಿ ಮುಂದುವರಿಯುವುದಿಲ್ಲ. ಅಲ್ಲದೆ ದೇಶದ ವಿವಿಧ ರಾಜ್ಯಗಳಲ್ಲಿ ಮತ್ತು ಭಾಗಗಳಲ್ಲಿ ಜನತೆ ಬದುಕುವ ಮತ್ತು ಜೀವಿಸುವ ವಿವಿಧ ದೇಶಗಳಾಗಿ ಪರಿಣಮಿಸುತ್ತದೆ. ಇದು ಭಾರತದ ಒಕ್ಕೂಟದ ಪ್ರಜೆಯಾಗಿರುವುದಕ್ಕೆ ಸರಿಸಮಾನವಾಗಿರುವುದಿಲ್ಲ.

ಜನತಾ ಪಕ್ಷವು ತನ್ನದು ಅಖಿಲ ಭಾರತದ ಪಕ್ಷವೆಂದು ಸಾರುವುದರಿಂದ ಮತ್ತು ಭಾರತದ ಒಕ್ಕೂಟದ ಬೇರೆ ಬೇರೆ ರಾಜ್ಯಗಳಲ್ಲಿ ವಾಸಿಸುವ ಜನರಿಗೆ ಉತ್ತರ ಕೊಡಬೇಕಾಗಿರುವುದರಿಂದ ಸರೋಜಿನಿ ಮಹಿಷಿ ಸಮಿತಿಯ ಶಿಫಾರಸ್ಸುಗಳನ್ನು ಈ ರಾಜ್ಯದ ಜನತಾ ಪಕ್ಷದ ಸರ್ಕಾರವು ಸಮಗ್ರವಾಗಿ ಒಪ್ಪಿಕೊಳ್ಳುವುದು ಮತ್ತೂ ವಿಸ್ಮಯಕಾರಿ. ಅಮೆರಿಕನ್ ಸಾಮ್ರಾಜ್ಯಶಾಹಿಗಳ ಮತ್ತು ಅವರ ಪ್ರತಿನಿಧಿಗಳು ಸಾಧ್ಯವಿದ್ದರೆ ಭಾರತವನ್ನು ತುಂಡು ತುಂಡು ರಾಜ್ಯಗಳನ್ನಾಗಿಸಿ ತಮ್ಮ ಹಿಡಿತದಲ್ಲಿರಿಸಿಕೊಳ್ಳುವ ಬೆದರಿಕೆಯ ಸನ್ನಿವೇಶದಲ್ಲಿ ನಾವು ಜೀವಿಸುತ್ತಿದ್ದೇವೆ. ದೇಶದ ಈಶಾನ್ಯ ಮತ್ತು ವಾಯುವ್ಯ ಭಾಗಗಳಲ್ಲಿ ಅನೇಕ ವಿಭಜನಾತ್ಮಕ ಚಳುವಳಿಗಳು ನಡೆಯುತ್ತಿವೆ. ಅವುಗಳಲ್ಲಿ ಕೆಲವು ಕೊನೆಯಿಲ್ಲದ ಶಸ್ತ್ರ ದಂಗೆಗಳ ಲಕ್ಷಣಗಳನ್ನೇ ವ್ಯಕ್ತಪಡಿಸುತ್ತವೆ. ಈ ಪ್ರಕ್ರಿಯೆಯಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳಿಂದ ಮತ್ತು ಅವರ ಪ್ರತಿನಿಧಿಗಳಿಂದ ಅನೇಕ ದಶಕಗಳಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯ ಸ್ವಾತಂತ್ರ ಚಳುವಳಿಯನ್ನು ನಡೆಸುತ್ತಿದ್ದ ವೇಳೆಯಲ್ಲಿ ಬೆಸೆದ ಭಾರತ ರಾಷ್ಟ್ರೀಯ ಪ್ರಜ್ಞೆಯನ್ನು ಕಡೆಗಣಿಸಲ್ಪಡುತ್ತಿದೆ. ಅಥವ ಬೇಕೆಂತಲೇ ಅದನ್ನು ಕಡಿಮೆ ಅಂದಾಜು ಮಾಡಲಾಗುತ್ತಿದೆ. ಸ್ವಾತಂತ್ರ ಹೋರಾಟದ ವೇಳೆ ಆಳುವ ಕಾಂಗ್ರೆಸ್ ಪಕ್ಷವೂ ಸೇರಿದಂತೆ ಚಾಲನೆಗೊಳಿಸಿದ ಸಾಮ್ರಾಜ್ಯಶಾಹಿ ವಿರೋಧಿ ಪ್ರಜ್ಞೆಯನ್ನು ಈ ರೀತಿ ಸತ್ವಹೀನವಾಗಿಸುವುದು ದೇಶದ ಭವಿಷ್ಯಕ್ಕೆ ಮತ್ತದರ ರಾಷ್ಟ್ರೀಯ ಐಕ್ಯತೆಗೆ ವಿಪತ್ತನ್ನು ಸಾರುತ್ತಿದೆ.

'ಬಲಯುತವಾದ' ಅಥವ ಒಮ್ಮತದ ಕೇಂದ್ರವನ್ನು ಕಟ್ಟುವ ಸುಪ್ರಸಿದ್ಧ ನೆಪದಲ್ಲಿ ರಾಜ್ಯದ ಸ್ವಯಮಾಧ ಪಕ್ಷವನ್ನು ಶಿಥಿಲಗೊಳಿಸುವ ಸತತ ಪ್ರಯತ್ನದಲ್ಲಿ ರಾಷ್ಟ್ರದ ಕೇಂದ್ರ ಮತ್ತು ಅಧಿಕಾರಿ ಶಾಹಿ ಆಳ್ವಿಕೆಯಲ್ಲಿ ನಿರಂತರವಾಗಿ ಬೆಳೆಯುತ್ತಿರುವ ಅನ್ಯಾಯ ಮತ್ತು ಅಸಮಾನತೆಯ ವಿರುದ್ಧ, ವಿವಿಧ ರಾಜ್ಯಗಳ, ಮುಖ್ಯ ಹಿತಗಳನ್ನು ಜನತೆಯ ಜೀವನವನ್ನೂ ಕಾಪಾಡುವುದರಲ್ಲಿ ಹೋರಾಡುವುದು ಒಂದು ವಿಷಯ. ಶೇಕಡಾ 80 ಪಾಲು ಹಿಸ್ಸೆಗಳು ಎಂಬುದನ್ನು ಶಾಸನ ಬದ್ಧ ಕಾನೂನನ್ನಾಗಿ ಮಾಡುವುದಾದರೆ ಅದು ಅಪಾಯಕಾರಿ ಧೋರಣೆಯಾಗುವುದು ಎಂಬುದು ಇನ್ನೊಂದು ವಿಷಯ, ಭಾರತದ ಒಕ್ಕೂಟದಲ್ಲಿ ವಿವಿಧ ರಾಜ್ಯಗಳಲ್ಲಿ ಸ್ಥಾಪಿಸಬೇಕೆನ್ನುವ ಪ್ರತಿಯೊಂದು ಹೊಸ ಆಧುನಿಕ ಕೈಗಾರಿಕೆಯಲ್ಲಿ ಬೇಕಾದ ಎಲ್ಲಾ ನೈಪುಣ್ಯತೆಯಿಂದ ಸಜ್ಜಾದ ಸ್ಥಳೀಯ ನುರಿತ ಜನರನ್ನು ಒದಗಿಸಬಹುದು ಎಂದು ಯಾವ ವಿವೇಕವುಳ್ಳ ಮನುಷ್ಯ ಹೇಳಬಲ್ಲ? ದೈಹಿಕ ಮತ್ತು ನಿಪುಣತೆ ಬೇಡದ ಕೆಲಸಗಳಲ್ಲಿ ಮಾತ್ರ ಸ್ಥಳೀಯರನ್ನು ಸೇರಿಸಿಕೊಳ್ಳುವಲ್ಲಿ ಕೆಲಸಗಳನ್ನು ಕಾದಿರಿಸಬೇಕೆನ್ನುವುದರಲ್ಲಿ ಒಂದು ಅರ್ಥವಿದೆ.

ಇವೆಲ್ಲಕ್ಕಿಂತಲೂ ಹೆಚ್ಚಾಗಿ, ಕಲ್ಕತ್ತ, ಬೊಂಬಾಯಿ, ಮದ್ರಾಸು, ಅಹಮ್ಮದಾಬಾದ್, ಹೈದರಾಬಾದ್, ಬೆಂಗಳೂರು, ಕಾನ್ಪುರ, ಜೆಮ್‌ಷೆಟ್‌ಪುರ, ರಾಂಚಿ, ಬಿಲೈ, ದುರ್ಗಾಪುರ, ರೂರ್ಕೆಲಾ ಇತ್ಯಾದಿ ಎಲ್ಲಾ ನಮ್ಮ ದೊಡ್ಡ ಪಟ್ಟಣಗಳು ಮತ್ತು ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರಗಳು ಈ ಹಿಂದೆ ಬ್ರಿಟಿಷ್ ಆಳ್ವಿಕೆಯಲ್ಲಿ ಭಾರತದ ಜನತೆಯ ಸಮಗ್ರ ಶ್ರಮದ ಫಲವಾಗಿ ನಿರ್ಮಿತಗೊಂಡವು. ಹೀಗೆ ನಿರ್ಮಿತಗೊಂಡವು ಮತ್ತು ಈಗ ನಿರ್ಮಾಣಗೊಳ್ಳುತ್ತಿರುವುವು ಆಯಾ ನಿರ್ದಿಷ್ಟ ರಾಜ್ಯಗಳ ಮಣ್ಣಿನ ಮಕ್ಕಳ 'ಉತ್ಪನ್ನ' [ನಿರ್ಮಾಣ]ಗಳಾಗಿಲ್ಲ. ಆದರೆ ಎಲ್ಲಾ ಭಾರತೀಯರ ಸಾಮೂಹಿಕ ಶ್ರಮ ಮತ್ತು ಇಡೀ ದೇಶದ ಸಾಮೂಹಿಕ ಸಂಪನ್ಮೂಲಗಳ ಉತ್ಪನ್ನಗಳಾಗಿವೆ. ಭಾರತದ ಒಕ್ಕೂಟದ ಪ್ರತಿಯೊಂದು ರಾಜ್ಯವೂ ಆಯಾ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಘನ ಕೈಗಾರಿಕೆ ತನ್ನದೇ "ಮಾಲಿಕತ್ವ" ಎಂದರೆ ಮತ್ತು ಉದ್ಯೋಗಗಳಿಗೆ ಶೇಕಡ ಶರತ್ತನ್ನು ಹೇರಿಸಲು ಪ್ರಾರಂಭಿಸಿದರೆ ಈಗ ರಾಜಕೀಯವಾಗಿ ತಿಳಿಯಲ್ಪಟ್ಟಿರುವ ಸ್ವತಂತ್ರ ಭಾರತ ಎಂಬುದಕ್ಕೆ ನಾಂದಿ ಹಾಡಲು ಪ್ರಾರಂಭವಾಗುವುದು

ಕಲ್ಕತ್ತ ಮತ್ತದರ ಹೊರವಲಯದಲ್ಲಿರುವ ಕೈಗಾರಿಕಾ ಮತ್ತು ವಾಣಿಜ್ಯ ಸಂಕೀರ್ಣದಲ್ಲಿ ದುಡಿತದಲ್ಲಿ ತೊಡಗಿರುವವರು, ಬಿಹಾರ, ಒರಿಸ್ಸಾ, ಉತ್ತರ ಪ್ರದೇಶ, ಆಂಧ್ರ, ತಮಿಳುನಾಡು ಮತ್ತಿತರ ಬೇರೆ ಬೇರೆ ಅನೇಕ ರಾಜ್ಯಗಳಿಂದ ಬಂದ ಬಂಗಾಳಿಯೇತರರು ಎಂಬುದನ್ನು ಹೆಗ್ಗಡೆ ಮತ್ತು ಸರೋಜಿ ಮಹಿಷಿ ಸಮಿತಿ ತಿಳಿದುಕೊಳ್ಳಲಿ. ಪಶ್ಚಿಮ ಬಂಗಾಳದಂತಹ ರಾಜ್ಯಗಳಲ್ಲಿ "ಮಣ್ಣಿನಮಕ್ಕಳಿಗೆ" ಉದ್ಯೋಗ ಶೇಕಡ 80 ಕಾದಿರಿಸುವಿಕೆ ಎಂಬ ದುಷ್ಟನೀತಿ ಎಂಬುದು ಆಚರಣೆಗೆ ಬಂದಲ್ಲಿ ದೇಶವು ವಿಪತ್ತಿನಲ್ಲಿ ಅಂತ್ಯಗೊಳ್ಳುವುದು. ಮುವತ್ತು ದಶಕಗಳ ಕಾಲದಲ್ಲಿ ಕೇಂದ್ರದ ಅನೇಕ ಘನ ಕೈಗಾರಿಕೆಗಳು ಬೆಂಗಳೂರು ನಗರವು ಸುತ್ತುವರಿದಂತೆ ಸ್ಥಾಪಿತವಾಗಿರುವುದು ಪ್ರಪಂಚಕ್ಕೆ ಸೇರಿದ ನಗರವಾಗಿದೆ ಮತ್ತು ಕರ್ನಾಟಕರಾಜ್ಯದಲ್ಲಿದ್ದರೂ ಸಹ ಇಡೀ ಭಾರತದ ಮತ್ತು ಎಲ್ಲಾ ಭಾರತೀಯರ–ಗಂಡು ಮಕ್ಕಳ, ಹೆಣ್ಣು ಮಕ್ಕಳ, ತಂದೆತಾಯಂದಿರ–ಸ್ವತ್ತಾಗಿದೆ.

ಕಾಂಗ್ರೆಸ್ಸೇ ದೇಶದಲ್ಲಿ ಈ ಶಕ್ತಿಗಳನ್ನು ಹರಿಯಬಿಟ್ಟಿದ್ದು ಎಂಬುದು ಎಲ್ಲರಿಗೂ ಚೆನ್ನಾಗಿ ತಿಳಿದ ಅಂಶವೇ ಆಗಿದೆ. ಮತ್ತು ಕರ್ನಾಟಕದಲ್ಲೇ ಮಹಾರಾಷ್ಟ್ರದ ಶಿವಸೇನೆಯ ಪ್ರತಿರೂಪ ಕನ್ನಡ ಚಳುವಳಿಗಾರರ ಬೆಂಬಲಿಗ ಗುಂಡೂರಾವ್ ಎಂಬ ಕುಖ್ಯಾತವಾದ ಉದಾಹರಣೆಯನ್ನು ನಾವು ಹೊಂದಿದ್ದೇವೆ. ಇದರಿಂದಾಗಿಯೇ ಬೊಂಬಾಯಿಯ ಶಿವಸೇನೆಯ ದಾರಿಯನ್ನು ಅಥವ ಆಂಧ್ರದ ಜಿಲ್ಲೆಗಳ ಜನರ ಮೇಲೆ ತೆಲಂಗಾಣದ ಜನರನ್ನು ಎತ್ತಿಕಟ್ಟಿ ಒಂದು ವಿಭಾಗದ ಆಂಧ್ರದ ಜನತೆಯಲ್ಲಿ ತಾರತಮ್ಯವನ್ನು ಒತ್ತಾಯಿಸಿ ಮುಲ್ಕಿ ಚಳುವಳಿಯನ್ನು ನಡೆಸಿದ ಡಾ. ಚೆನ್ನಾರೆಡ್ಡಿಯ ದಾರಿಯನ್ನೇ ಕರ್ನಾಟಕದ ಹೆಗ್ಗಡೆ ಸರ್ಕಾರ ಮತ್ತು ಜನತಾ ಮುಖಂಡರು ಅನುಸರಿಸದಿರಲೆಂದು ನಾವು ಮನವಿ ಮಾಡಿಕೊಳ್ಳುತ್ತೇವೆ. ಭಾರತದ ಐಕ್ಯತೆ ಮತ್ತು ಒಗ್ಗಟ್ಟಿನ ಹೆಸರಿನಲ್ಲಿ ರಾಜ್ಯಗಳ ಸ್ವಯಮಾಡಳಿತಾಧಿಕಾರವನ್ನು ನಾಶಪಡಿಸಲು ಹೊರಟಿರುವರೋ ಅವರ ಬಲೆಗೆ ಭಾಷಾಂಧಾಭಿಮಾನವನ್ನು ಹರಿಯಬಿಟ್ಟು ಕರ್ನಾಟಕ ಸರ್ಕಾರವು ಬೀಳದಿರಲೆಂದು ನಾವು ಅವರನ್ನು ಒತ್ತಾಯಿಸುತ್ತೇವೆ.

ನಿಜ ಸಂಗತಿ ಮುಚ್ಚಿಟ್ಟ ಶ್ವೇತ ಪತ್ರ

ಪಂಜಾಬ್ ಸಮಸ್ಯೆಯ ಕುರಿತು ಇಂದಿರಾ ಸರಕಾರದ ಶ್ವೇತ ಪತ್ರ ಪ್ರಕಟವಾಗಿದೆ. ಅದರಲ್ಲಿ ಸಿಪಿಐ(ಎಂ) ಮುಖಂಡರಾದ ಹರಕಿಶನ್ ಸಿಂಗ್ ಸುರ್ಜಿತ್ ಅವರ ಮಧ್ಯಸ್ತಿಕೆಯನ್ನೂ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಹಾಗೆಯೇ ವಿರೋಧ ಪಕ್ಷಗಳ ಸಲಹೆ ಸೂಚನೆಗಳನ್ನೂ, ಪ್ರಯತ್ನವನ್ನೂ ನಮೂದಿಸಿಲ್ಲ. 1971 ರಲ್ಲಿ ಇಂದಿರಾ ಗಾಂಧಿಯೇ ಮುಂದೆ ಮಾಡಿದ ಸೂಚನೆಗಳನ್ನು ಯಾಕೆ ಕೃತಿಯಲ್ಲಿಳಿಸಲಿಲ್ಲ. ಪ್ರತ್ಯೇಕತಾವಾದಿಗಳ ಖಲಿಸ್ತಾನ್ ಘೋಷಣೆಗೆ ಇನ್ನೂ ಅಕಾಲಿಗಳಿಂದ ಬೆಂಬಲ ಸಿಗದಿದ್ದಾಗ, ಅದರ ವಿರುದ್ಧ ಕೇಂದ್ರ ಸರಕಾರ ಯಾಕೆ ಕ್ರಮಕೈಗೊಂಡಿಲ್ಲ, ಅಕಾಲಿಗಳ ಐಕ್ಯತೆ ಮುರಿಯುವ ಸಲುವಾಗಿ, ಅವರ ಪ್ರಧಾನ ಕುಂಠಿತಗೊಳಿಸುವ ಸಲುವಾಗಿ ಮಾತಾಡಲೂ ಬಾರದಂತ, ಜನರಲ್ಲಿ ಏನೂ ಪ್ರಭಾವವಿಲ್ಲದಂತ ಭಿಂದ್ರನ್‌ವಾಲೆಯಂಥವನಿಗೆ ಪ್ರೋತ್ಸಾಹ ನೀಡಿ, ಕಾಂಗ್ರೆಸ್ ಪ್ರಚಾರಕ್ಕೆ ಅವನನ್ನು ಉಪಯೋಗ ಮಾಡಿಕೊಂಡಿರುವುದನ್ನೂ ತಿಳಿಸಿಲ್ಲ. ಭಿಂದ್ರನ್‌ವಾಲೆ ಉಗ್ರಗಾಮಿಗಳ ಗುರುವಾಗಿ ವಿದೇಶಗಳಿಂದ ಶಸ್ತ್ರಾಸ್ತ್ರ ತರಿಸಿ, ಸ್ವರ್ಣ ಮಂದಿರ ಮತ್ತು ಗುರುದ್ವಾರಗಳನ್ನು ಉಗ್ರಗಾಮಿಗಳ ನೆಲೆಗಳನ್ನಾಗಿ ಪರಿವರ್ತಿಸಲು, ಹಿಂದೂ-ಸಿಖ್ಖರನ್ನು ಕೊಲೆ ಮಾಡಲು ಅವಕಾಶ ಮಾಡಿಕೊಟ್ಟವರಾರೆಂಬುದನ್ನು ಉಲ್ಲೇಖಿಸಿಲ್ಲ, ಅವುಗಳನ್ನೆಲ್ಲ ತಡೆಯುವಲ್ಲಿ ತಮ್ಮ ಸರಕಾರದ ವೈಫಲ್ಯವನ್ನು ಒಪ್ಪಿಕೊಂಡಿಲ್ಲ.

ವಿರೋಧ ಪಕ್ಷಗಳು ಅಕಾಲಿದಳದೊಡನೆ ಚರ್ಚಿಸಿ ಮೂರು ಸಲ ಒಮ್ಮತದ ಸೂಚನೆಗಳನ್ನು ಮಂಡಿಸಿದಾಗ ಚರ್ಚೆ ನಡೆದಾಗ ಕೇಂದ್ರ ಸರಕಾರ ಅವುಗಳನ್ನು ಒಪ್ಪಿಕೊಂಡಿದ್ದರೂ, ಕೊನೆ ಘಳಿಗೆಯಲ್ಲಿ ಅವುಗಳನ್ನು ಯಾಕೆ ವಿರೋಧಿಸಿದರೆಂಬುದರ ಕುರಿತು ಉಲ್ಲೇಖವಿಲ್ಲ. ಉಗ್ರಗಾಮಿಗಳಿಗೆ ಎಲ್ಲ ರೀತಿಯ ಸಹಾಯ ಮಾಡಿದ ವಿಶೇಷ ಶಕ್ತಿಗಳಾವುವೆಂಬುದನ್ನು ತಿಳಿಸಿಲ್ಲ.

ತಾ 11 ರಂದು ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘ ಏರ್ಪಡಿಸಿದ್ದ ಸಂದರ್ಶನದಲ್ಲಿ ಮಾತಾಡುತ್ತ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಹರಕಿಶನ್ ಸಿಂಗ್ ಸೂರ್ಜಿತ್ ಅವರು ಇಡೀ ಸಿಖ್ಖ ಸಮಾಜವೇ ಉಗ್ರಗಾಮಿಗಳಿಗೆ ಬೆಂಬಲ ನೀಡಿದೆಂಬುದಕ್ಕೆ ದಾಖಲೆಗಳಿಲ್ಲೆಂದೂ, ಸಿಖ್ಖರು ಕೂಡ ಉಗ್ರಗಾಮಿಗಳ ಹತ್ಯೆಗೆ ಬಲಿಯಾಗಿದ್ದಾರೆಂದೂ, ತನ್ನ ತಪ್ಪುಗಳನ್ನು ಮುಚ್ಚಿಕೊಳ್ಳುವ ಸಲುವಾಗಿ, ತನ್ನ ರಾಜಕೀಯ ದುರುದ್ದೇಶಕ್ಕಾಗಿ ಹಿಂದುಗಳನ್ನು ಅಕಾಲಿಗಳ ವಿರುದ್ಧ ಎತ್ತಿ ಕಟ್ಟುವ ಕುತಂತ್ರವನ್ನು ಮರೆಮಾಡುವ ಸಲುವಾಗಿ ಎಲ್ಲ ಅಕಾಲಿಗಳೂ ಉಗ್ರಗಾಮಿಗಳೆಂದು ಆರೋಪ ಹೊರಿಸುತ್ತಿದ್ದಾರೆಂದೂ, ಆ ಕಾರಣದಿಂದಲೇ ಹಲವಾರು ತಿಂಗಳುಗಳಿಂದಲೂ ಸ್ವರ್ಣ ಮಂದಿರದ ಆವರಣದೊಳಗೆ ಏನು ನಡೆಯುತ್ತಿದೆಂಬುದರ ಕುರಿತು ಸಾರ್ವಜನಿಕರಿಗೆ ತಿಳಿಯಪಡಿಸದೆ, ಉಗ್ರಗಾಮಿಗಳು ತಮ್ಮ ಭಯೋತ್ಪಾದಕ ಚಟುವಟಿಕೆಗಳನ್ನು ತೀವ್ರಗೊಳಿಸಲು ಅಪ್ರತ್ಯಕ್ಷ ಸಹಾಯ ಮಾಡುತ್ತಿದ್ದರೆಂದೂ ಆರೋಪ ಹೊರಿಸಿದ್ದಾರೆ.

ಉಗ್ರಗಾಮಿಗಳಿಗೆ ಪಾಕಿಸ್ತಾನದಲ್ಲಿ ಸೈನ್ಯ ಶಿಕ್ಷಣ ಕೊಡಲಾಗುತ್ತಿದೆಂದು ನಾನು ತಿಳಿಸಿದಾಗ ಕೇಂದ್ರ ಗೃಹ ಶಾಖೆ ಮಂತ್ರಿ ಅದನ್ನು ಒಪ್ಪಿಕೊಂಡಿದ್ದರೆಂದೂ, ಆದರೆ ಅಮೇರಿಕ ಮತ್ತು ಪಾಕಿಸ್ತಾನ ಉಗ್ರಗಾಮಿಗಳಿಗೆ ಸಹಾಯ ಮಾಡುತ್ತಿದೆಂದು ಶ್ವೇತ ಪತ್ರದಲ್ಲಿ ಉಲ್ಲೇಖಿಸದೆ ಮುಚ್ಚಿಡಲಾಗಿದೆಂದೂ ಹೇಳಿದ್ದಾರೆ.

ಖಲಿಸ್ತಾನದ ಕುರಿತು ಅಕಾಲಿಗಳಿಗೆ ಯಾವದೇ ಭಾವನೆ ಇಲ್ಲದಿದ್ದಾಗ ಉಗ್ರಗಾಮಿಗಳಿಗೂ ಬೆಂಬಲ ಸಿಗದಿದ್ದಾಗ ಅಕಾಲಿದಳವನ್ನೂ ವಿರೋಧ ಪಕ್ಷಗ

[6ನೇ ಪುಟ ನೋಡಿ]

ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು | 7

ರಾಷ್ಟ್ರೀಯತೆಯ ಪ್ರಶ್ನೆ : ದುರುದ್ದೇಶಗಳನ್ನು ಆರೋಪಿಸುವುದು ಚಾರಿತ್ರಿಕ ವಿಶ್ಲೇಷಣೆಯ ಉಚಿತ ವಿಧಾನವಲ್ಲ

— ಕಾ|| ಎಂ. ಬಸವಪುನ್ನಯ್ಯ

(ಮೂರನೆಯ ಭಾಗದ ಎರಡನೆಯ ಕಂತು)

(ಕಳೆದ ಸಂಚಿಕೆಯಿಂದ)

ಹೊಲಸು ಅಪಪ್ರಚಾರ

ಪಿ. ಸಿ. ಜೋಷಿಯವರಿಗೆ ಬರೆದ ಕಾಗದಗಳಲ್ಲಿ ಒಂದಕ್ಕೆ ಗಾಂಧಿ ಆಂಧ್ರ ಪ್ರದೇಶದ ಒಬ್ಬ ಪ್ರಮುಖ ಕಾಂಗ್ರೆಸ್ ಮುಖಂಡರಾಗಿದ್ದ ಎ. ಕಾಳೇಶ್ವರರಾವ್ ತನಗೆ ಬರೆದಿದ್ದ ಒಂದು ಕಾಗದವನ್ನು ಲಗತ್ತಿಸಿ ಕಳುಹಿಸಿದ್ದರು. ಈ ಲಗತ್ತಿಸಿದ ಪತ್ರದ ಪೂರ್ಣ ಪಾಠ ಹೀಗಿದೆ— "ಅವರು (ಅಂದರೆ ಆಂಧ್ರ ಕಮ್ಯೂನಿಸ್ಟರು) ಕಮ್ಯೂನ್‌ಗಳಲ್ಲಿ ನಾಟಕಗಳನ್ನು ಆಡಿದರು. ಅವುಗಳಲ್ಲಿ ಪ್ರತಿಯೊಂದರ ಕಥೆಯಲ್ಲೂ ಗುಂಡುಹಾರಿಸುವುದು, ಗಲ್ಲಿಗೇರಿಸುವುದು ಮತ್ತು ರಕ್ತಪಾತಪೂರ್ಣ ಕೊಲೆಗಳಿರುತ್ತಿದ್ದವು. ವಿದ್ಯಾರ್ಥಿ ಸದಸ್ಯರು ಕೈಗಳಿಗೆ ಕೆಂಪು ಬಣ್ಣ ಹಚ್ಚಿಕೊಂಡು ಗಲ್ಲಿಗೇರಿಸುವವರ, ಕೊಲೆಗಾರರ ಪಾತ್ರ ವಹಿಸುವಂತೆ ಮಾಡಲಾಗುತ್ತಿತ್ತು. ಕಮ್ಯೂನಿನಲ್ಲಿ ಪ್ರತಿ ದಿನ ಮಾಂಸದ ಅಡಿಗೆ ತಯಾರಿಸಿ ಒಂದೇ ಮೇಜಿನ ಎದುರು ಕೂತು ಉಣ್ಣಬೇಕೆನ್ನುವ ನಿಯಮವನ್ನು ಮಾಡಿದ್ದಾರೆ. ಬ್ರಾಹ್ಮಣರು ಮತ್ತು ವೈಶ್ಯರು ಮೊದಲಾದ ಅನುವಂಶಿಕ ಶಾಖಾಹಾರಿಗಳ ಮತ್ತು ವಿದ್ಯಾರ್ಥಿಗಳು ಕೂಡಾ ಮಾಂಸ ತಿನ್ನುವಂತೆ ಉದ್ದೇಶಪೂರ್ವಕವಾಗಿ ಕಲಿಸಿ ಹಿಂಸೆಯ ಬಗ್ಗೆ ಅಸಹ್ಯ ಪಡದಂತೆ ಅವರು ಮಾಡುತ್ತಿದ್ದರು. ಗಾಂಧಿ ಅಹಿಂಸೆಯ ಬಗ್ಗೆ ಒತ್ತಾಯ ಮಾಡುತ್ತಿದ್ದುದಕ್ಕಾಗಿ ತಾನು ಮಾಂಸಾಹಾರ ಆರಂಭಿಸಿದೆ ಎಂದು ಒಬ್ಬ ಬ್ರಾಹ್ಮಣ ಎಂ. ಎ. ಪದವೀಧರ ನನಗೆ ಹೇಳಿದ. ಇನ್ನೊಬ್ಬ ವೈಶ್ಯ ಬಿ.ಎಸ್.ಸಿ. ಪದವೀಧರ ತಾನು ಆ ದಿನದಿಂದ ದರಿದ್ರ ಖದ್ದರ್‌ನ ಉಪಯೋಗದಿಂದ ಸ್ವಾತಂತ್ರ್ಯ ಪಡೆದೆ ಎಂದು ನನಗೆ ಹೇಳಿದ. ಖದ್ದರನ್ನು ಆತ ಇಪ್ಪತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಬಳಸುತ್ತಿದ್ದ. ಆತ ಮಾಂಸಾಹಾರದ ಶ್ರದ್ಧಾವಂತ ಪ್ರಚಾರಕನಾಗಿ ಬಿಟ್ಟಿದ್ದ. ಎಲ್ಲ ಅಂಗಳದಲ್ಲಿ ಅವರು ತರಗತಿ ನಡೆಸುತ್ತಿದ್ದರು. ಅವರು ಗಾಂಧಿ ವಿರೋಧಿ, ಸತ್ಯ ವಿರೋಧಿ, ಅಹಿಂಸಾ-ವಿರೋಧಿ, ಗ್ರಾಮ ಕೈಗಾರಿಕೆ-ವಿರೋಧಿಗಳಾಗಿದ್ದು ತಮ್ಮ ಭಾಷಣಗಳಲ್ಲಿ ಲೈಂಗಿಕ ಅರಾಜಕತೆಯನ್ನು ಬೋಧಿಸುತ್ತಿದ್ದರು. ಅಂತಹ ಒಂದು ಸಭೆಯಲ್ಲಿ ಅವರ ಒಬ್ಬ ಮುಖಂಡ ಗಾಂಧಿ ಭಾರತದ ರಾಸ್‌ಪುಟಿನ ಎಂದು ಘೋಷಿಸಿದ.

ಅವರು ಅಧ್ಯಯನ ಮಾಡುವ ಒಂದು ಪುಸ್ತಕವಿದೆ-ಎಂಗೆಲ್ಸ್ ಬರೆದುದು. ಆ ಪುಸ್ತಕದಲ್ಲಿ ಆತ ಗುಂಪು ವಿವಾಹ ಅಥವಾ ಅವಳಿ ವಿವಾಹ (ಇಬ್ಬರು ಗಂಡಂದಿರಿಗೆ ಇಬ್ಬರು ಹೆಂಡತಿಯರು ಜಂಟಿಯಾಗಿ)ಗಳನ್ನು ಪ್ರೋತ್ಸಾಹಿಸಿದ್ದಾನೆ ಮತ್ತು ಏಕ ಪತ್ನಿತ್ವ ಹೆಂಗಸರ ಸ್ವಾತಂತ್ರ್ಯವನ್ನು ದಮನ ಮಾಡಲು ನಡೆಸಿದ ಬೂರ್ಜ್ವಾ ಸೃಷ್ಟಿಯೆಂದು ಖಂಡಿಸಿದ್ದಾನೆ. ಅವರು ಸಾಮಾನ್ಯ ಕಾಂಗ್ರೆಸ್ಸಿಗರು, ವಿಶೇಷತಃ ರಾಷ್ಟ್ರೀಯವಾದಿ ವಿದ್ಯಾರ್ಥಿಗಳು, ಯುವಕರು ಹಾಗೂ ರೈತ ಕಾರ್ಯಕರ್ತರನ್ನು ತಮ್ಮ ಪ್ರಮುಖ ಪ್ರತಿಸ್ಪರ್ಧಿಗಳು ಎಂದು ಪರಿಗಣಿಸಿ ಅವರ ವಿರುದ್ಧ ಪೋಲೀಸರಿಗೆ ಸುಳಿವು ನೀಡುವ, ಗುಪ್ತಚಾರ ಕೆಲಸವನ್ನು ಮಾಡುತ್ತಾರೆ. ಸುಳ್ಳು ಸುದ್ದಿ ಕೊಟ್ಟೇ ಆಗಲಿ ತಮ್ಮ ವಿರೋಧಿಗಳನ್ನು ದಮನ ಮಾಡಲು ಚಿತ್ರಗಳನ್ನು ಪ್ರಯೋಗಿಸಿ ಹೊಡೆಯಲು ಅವರ ಪಕ್ಷದ ನಾಯಕರಿಂದ ಗುಪ್ತ ನಿರ್ದೇಶನಗಳನ್ನು ಅವರು ಪಡೆಯುತ್ತಿರುತ್ತಾರೆ."

ಇಂತಹ ಕೋಟಾ ಕಪೋಲಕಲ್ಪನೆಗಳ ಬಗ್ಗೆ ಟೀಕೆ ಅನಗತ್ಯ. ಆದರೆ ಕಮ್ಯುನಿಸ್ಟರನ್ನು ದೂಷಿಸುವ ಕಾಂಗ್ರೆಸ್ ಅಪಪ್ರಚಾರ ನಮ್ಮ ಸಮಾಜದಲ್ಲಿರುವ ಅತ್ಯಂತ ಹಿಂದುಳಿದ ಭಾವನೆಗಳನ್ನೆಲ್ಲಾ ಕೆರಳಿಸಿ ಯಾವ ಪ್ರಮಾಣಕ್ಕೆ ಇಳಿದಿತ್ತು ಎಂಬುದನ್ನು ಅದು ಎತ್ತಿ ತೋರಿಸುತ್ತದೆ. ಇದು ಕೂಡಾ ವಿಫಲವಾಗಬಹುದೆಂಬ ಭಯದಿಂದ ವಾಸ್ತವಾಂಶಗಳನ್ನು ಏಕ್‌ದಂ ವಿಕೃತಗೊಳಿಸಲಾಯಿತು, ಸುಳ್ಳುಗಳನ್ನು ಆಶ್ರಯಿಸಲಾಯಿತು. ಇಲ್ಲಿ ಹೇಳಿರುವ ಪುಸ್ತಕ ಬೇರೆ ಯಾವುದೂ ಅಲ್ಲ, ಎಂಗೆಲ್ಸ್‌ರ ಪ್ರಸಿದ್ಧ ಕೃತಿ "ಕುಟುಂಬ, ಖಾಸಗೀ ಆಸ್ತಿ ಮತ್ತು ಪ್ರಭುತ್ವದ ಉಗಮ" ಇದರಲ್ಲಿ ಕಾಳೇಶ್ವರ ರಾವ್ ಕೊಟ್ಟಿರುವ "ಸಂಗತಿ"ಗಳನ್ನು ಸುಲಭವಾಗಿ ಪರೀಕ್ಷಿಸಬಹುದು. ಈ ಕೃತಿಯಲ್ಲಿ ಮನ ಬಂದಂತೆ ಬರೆದ ಒಂದೇ ಒಂದು ವಾಕ್ಯವೂ ಇಲ್ಲ. ಬದಲಿಗೆ, ಪ್ರತಿಯೊಂದೂ ಅಗಾಧ ಚಾರಿತ್ರಿಕ ಹಾಗೂ ರಾಜಕೀಯ ಸಾಮಗ್ರಿಯನ್ನು ಆಧರಿಸಿದೆ. ಇದನ್ನು ವಿಕೃತಗೊಳಿಸುವುದು ಹೆಚ್ಚೆಂದರೆ ಬರೆದಿರುವವನ ರಾಜಕೀಯ ಹಾಗೂ ತಾತ್ವಿಕ ಬಾಲಿಶತನವನ್ನು ತೋರಿಸಿಕೊಡುತ್ತಷ್ಟೆ. ಆದರೆ ಇಲ್ಲಿ ನಮಗೆ ಪ್ರಸ್ತುತವಾದ ಅಂಶವೆಂದರೆ ಪಕ್ಷದ ನಾಯಕತ್ವ ಇಂತಹ ದೂಷಣೆಗಳಿಗೆ ಪ್ರಜ್ಞಾಪೂರ್ವಕವಾಗಿ ಪ್ರೋತ್ಸಾಹ ನೀಡಿತು - ಯಾಕೆಂದರೆ ಕಾಳೇಶ್ವರ ರಾವ್ ವಿಜಯವಾಡಾದ ಪ್ರಮುಖ ವಕೀಲರು ಮಾತ್ರವಲ್ಲ ಪ್ರಸಿದ್ಧ ಕಾಂಗ್ರೆಸ್ಸಿಗರೂ ಆಗಿದ್ದರು—ಮಾತ್ರವಲ್ಲ ಗಾಂಧಿ ಇಂತಹ ಸಾಮಗ್ರಿಗಳನ್ನು ಬಳಸಲು ಅವನ್ನು ಪಿ.ಸಿ. ಜೋಷಿಗೆ ಕಳುಹಿಸಲು ಸಿದ್ಧರಾಗಿದ್ದರು ಎಂಬುದು.

ನಿಷ್ಫಲ ಭಾವಾತಿರೇಕ

ಇದಕ್ಕುತ್ತರವಾಗಿ 1944 ಸಪ್ಟಂಬರ್ 12ರಂದು ಪಿ. ಸಿ. ಜೋಷಿಯವರು ಗಾಂಧಿಗೆ ಬರೆದ ಪತ್ರಕ್ಕಾಗಿಯೇ ನಿಮ್ಮನ್ನು ತರಾಟೆಗೆ ತಗೊಳ್ಳಲು ಶೌರಿ ಪ್ರಯತ್ನಿಸಿರುವುದು. ಜೋಷಿಯವರ ಉತ್ತರ ಹೀಗಿತ್ತು-

"ಆರಂಭದಲ್ಲೇ ನಿಮ್ಮ ಪತ್ರಕ್ಕೆ ಪೂರ್ಣವಾಗಿ ನನ್ನ ಪ್ರತಿಕ್ರಿಯೆಯನ್ನು ನಾನು ಕೊಟ್ಟುಬಿಡಬಹುದು. ನೀವು ಬರೆದುದನ್ನು ನನ್ನ ಸ್ವಂತ ತಂದೆಯೇ ನನಗೆ ಬರೆದಿದ್ದರೆ ನಾನು ಆತನ ಪತ್ರಕ್ಕೆ ಉತ್ತರಿಸುತ್ತಿರಲಿಲ್ಲ. ಮತ್ತು ಆತನನ್ನು ಕಾಣಲು ಮತ್ತೆಂದಿಗೂ ಹೋಗುತ್ತಿರಲಿಲ್ಲ. ನಾನು ನಿಮಗೆ ಬರೆಯುತ್ತಿರಲು ಕಾರಣ ನೀವು ದೇಶದ ತಂದೆ. ನೀವು ನನ್ನನ್ನು ಅವಮಾನಿಸಿ ತೇಜೋವಧೆ ಮಾಡಿದರೂ ಕೂಡಾ ನಿಮ್ಮೊಡನೆ ಸಿಟ್ಟಾಗುವುದು ನನ್ನ ಮಟ್ಟಿಗೆ ದೇಶಪ್ರೇಮದ ಕೆಲಸವಾಗುವುದಿಲ್ಲ." ಮುಂದುವರಿದು ಜೋಷಿ "ನೀವು ಬರೆದಿರುವುದರ ಅರ್ಥ ಅದಲ್ಲ. ಆದರೆ ನಮ್ಮ ದೃಷ್ಟಿಕೋನದ ಬಗ್ಗೆ ನಿಮ್ಮ ಅಜ್ಞಾನ ಮತ್ತು ನಮ್ಮ ಪಕ್ಷದ ಬಗ್ಗೆ ನಿಮ್ಮ ಪೂರ್ವಾಗ್ರಹ ಎಷ್ಟೊಂದು ಇದೆಯೆಂದರೆ ನೀವು ಏನು ಬರೆಯುತ್ತಿದ್ದೀರಿ ಎನ್ನುವುದನ್ನು ಕೂಡಾ ನೀವು ಅರಿತುಕೊಳ್ಳುವುದಿಲ್ಲ." ಎಂದು ಸೇರಿಸಿದ್ದರು. [ಮಹಾತ್ಮ ಗಾಂಧಿ ಮತ್ತು ಪಿ. ಸಿ. ಜೋಷಿ ನಡುವಣ ಪತ್ರವ್ಯವಹಾರ –ಪಿ. ಪಿ. ಎಚ್. ಪ್ರಕಾಶನ ಜೂನ್ 1945, ಪುಟ 23-24]

ಮಹಾತ್ಮ ಗಾಂಧಿ ಮತ್ತು ಕಮ್ಯೂನಿಸ್ಟ್ ಪಕ್ಷದ ನಡುವಿನ ಸಂಬಂಧಗಳು "ಆಧ್ಯಾತ್ಮಿಕ" ಗುಣದವು ಆಗಿರಲಿಲ್ಲ, ಬದಲಿಗೆ ಅವು ಒಂದು ಶುದ್ಧ ರಾಜಕೀಯ ಪ್ರಕೃತಿ ಹೊಂದಿದ್ದವು ಎಂಬುದನ್ನು ನಮ್ಮ ಟೀಕಾಕಾರರಿಗೆ ಮತ್ತು ಓದುಗರಿಗೆ ನಾವು ತುಂಬಾ ಸ್ಪಷ್ಟವಾಗಿ ಹೇಳಬೇಕಾಗಿದೆ. ಮಾರ್ಕ್ಸ್ ತತ್ತ್ವಶಾಸ್ತ್ರ ಮತ್ತು ಸಿದ್ಧಾಂತದ ಬಗ್ಗೆ ಎಂದೂ ಬಗೆಹರಿಸಲಾಗದ ತನ್ನ ದ್ವೇಷವನ್ನು ಗಾಂಧಿ ಎಂದೂ ಮುಚ್ಚಿಡಲಿಲ್ಲ ಅದೇ ರೀತಿ ನಾವು ಕೂಡಾ ಗಾಂಧಿ ಬೋಧಿಸಿದ ತಥಾ ಕಥಿತ "ಸತ್ಯ", "ಅಹಿಂಸೆ" "ನಿಷ್ಕ್ರಿಯ ಪ್ರತಿಭಟನೆ" ಇತ್ಯಾದಿಗಳಲ್ಲಿ ನಮಗೆ ಕೊಂಚವೂ ನಂಬಿಕೆಯಿಲ್ಲ ಎಂಬುದನ್ನು ಎಂದೂ ಬಚ್ಚಿಡಲಿಲ್ಲ.

ಕಮ್ಯೂನಿಸ್ಟರಿಗೆ ಗಾಂಧಿಯ ಬಗ್ಗೆ ಗೌರವಭಾವನೆ ಇರಲಿಲ್ಲ ಎಂದು ಹೇಳಿ ಈ ಪ್ರಶ್ನೆಯ ಮೌಲ್ಯಮಾಪನ ಮಾಡುವಲ್ಲಿ ಬರಿಯ ಭಾವಾತಿರೇಕವನ್ನು ತುರುಕಿಸುವುದು ನಿಷ್ಪ್ರಯೋಜಕ. ನಮ್ಮ ಅಗೌರವ ರಾಷ್ಟ್ರೀಯ ಆಂದೋಲನದ ಒಬ್ಬ ಅತ್ಯಂತ ಪ್ರಮುಖ ಮುಖಂಡರಾದ ಅವರ ವ್ಯಕ್ತಿತ್ವದ ಬಗೆಗಿರದೆ, ಅವರ ರಾಜಕೀಯ, ಸೈದ್ಧಾಂತಿಕ ಮತ್ತು ತಾತ್ವಿಕ ದೃಷ್ಟಿಕೋನಗಳ ಬಗೆಗಿತ್ತು.

"ಕಮ್ಯೂನಿಸ್ಟರ ವಿಶ್ವಾಸಘಾತ"ವನ್ನು ಸಿದ್ಧಪಡಿಸುವ ತನ್ನ ಧ್ಯೇಯ ಸಾಧನೆಗಾಗಿ ಶೌರಿ ಇನ್ನೊಂದು ಆಪಾದನೆ ಹೊರಿಸುತ್ತಾರೆ. ಕಮ್ಯೂನಿಸ್ಟರನ್ನು "ಏಜೆಂಟರು" ಮತ್ತು "ಭಾರತೀಯ ಸ್ವಾತಂತ್ರ್ಯ ಆಂದೋಲನದ ಶತ್ರುಗಳು" ಎಂದು ಕರೆದು ತೃಪ್ತನಾಗದ ಆತ ಸಿ. ಪಿ. ಐ. ಜಿನ್ನಾ ಮತ್ತು ಮುಸ್ಲಿಂ ಲೀಗ್‌ನ ಏಜಂಟನಾಗಿ ಕೂಡಾ ವರ್ತಿಸಿತು ಎಂದು ಸಿದ್ಧಪಡಿಸಲು ಪ್ರಯತ್ನಿಸುತ್ತಾರೆ.

"ಕಾಂಗ್ರೆಸ್-ಲೀಗ್ ಐಕ್ಯತೆಗಾಗಿ ದುಡಿಯಿರಿ", 'ಐಕ್ಯತಾ ಸಪ್ತಾಹಕ್ಕೆ ಭಾರತ ಕಮ್ಯೂನಿಸ್ಟ್ ಪಕ್ಷದ ಘೋಷಣಾಪತ್ರ" ಹಾಗೂ "ಪಾಕಿಸ್ತಾನ ಮತ್ತು ರಾಷ್ಟ್ರೀಯ ಐಕ್ಯತೆ ಕುರಿತು" ಇತ್ಯಾದಿ ಸಿ. ಪಿ. ಐ. ಪ್ರಕಟಣೆಗಳನ್ನು ಹೆಸರಿಸಿದ ನಂತರ ಮುಂದುವರಿದು ಆತ ಈಗಾಗಲೇ ಸುಪರಿಚಿತವಾಗಿರುವ ರೀತಿಯಲ್ಲೇ ಮೇಲೆ ಹೇಳಿದ ದಸ್ತಾವೇಜುಗಳ ವಿಕೃತ ಸಾರಾಂಶ ಕೊಡುತ್ತಾರೆ. "ಕಮ್ಯೂನಿಸ್ಟ್ ಪಕ್ಷ ಸಾರ್ವಜನಿಕವಾಗಿ ಒಂದು ರಾಷ್ಟ್ರೀಯ ಸರಕಾರಕ್ಕಾಗಿ ಒತ್ತಾಯಿಸುತ್ತಿದ್ದರೂ" ಈ ಘೋಷಣೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿಲ್ಲ, ಯಾಕೆಂದರೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಕೂಟದ ಇಂತಹ ಒಂದು ರಾಷ್ಟ್ರೀಯ ಸರಕಾರ ಇಲ್ಲದೆಯೂ ಯುದ್ಧ ಪ್ರಯತ್ನಗಳನ್ನು ಮುಂದುವರಿಸಬಹುದು ಎಂದು ಖಾಸಗಿಯಾಗಿ ಬ್ರಿಟಿಶ್ ರಾಜ್ಯಭಾರಕ್ಕೆ ಆಶ್ವಾಸನೆ ನೀಡುತ್ತಿತ್ತು ಎಂದು ಆತ ಹೇಳಿಕೊಳ್ಳುತ್ತಾರೆ ಒಂದೆಡೆ ಕಾಂಗ್ರೆಸ್-ಲೀಗ್ ಐಕ್ಯತೆಗಾಗಿ. ಕಮ್ಯೂನಿಸ್ಟರು ಸಾರ್ವತ್ರಿಕ ಪ್ರಚಾರ ನಡೆಸುತ್ತಿದ್ದರು ಎಂದು ಒಪ್ಪಿಕೊಳ್ಳಬೇಕಾಗಿ ಬಂದರೂ ಕೂಡಾ ಶೌರಿ ಲಾಭಕರವಾದುದನ್ನಷ್ಟೆ ಆರಿಸಿಕೊಳ್ಳುವ ತನ್ನ ಸಹಜ ಬುದ್ಧಿಗನುಗುಣವಾಗಿ "ಇಲ್ಲತ್ತು ನೋಡಿ-ಸದಾ ಸಹಾಯಕಾರಿ ಮುಸ್ಲಿಂ ಲೀಗ್‌ನ್ನು ಬೆಂಬಲಿಸುವ ಒಂದು ಮುಸ್ಲಿಮೇತರ ಪಕ್ಷ" ಎಂಬ ತನ್ನ ಪೂರ್ವಕಲ್ಪಿತ ನಿರ್ಣಯದತ್ತ ಸಾಗುತ್ತಾರೆ.

ಕೋಮುವಾದೀ ದೃಷ್ಟಿ

ಪ್ರಾಸಂಗಿಕವಾಗಿ, ಮುಸ್ಲಿಂ ಲೀಗ್ ಬಿಟ್ಟು ಉಳಿದ ಪಕ್ಷಗಳಿಗೆ "ಮುಸ್ಲಿಮೇತರ" ಎಂಬ ಪದದ ಬಳಕೆಯೇ ಶೌರಿಯಲ್ಲಿ ಕೋಮುವಾದೀ ಪರಿವೀಕ್ಷಣೆ ಎಷ್ಟು ಆಳವಾಗಿ ಬೇರೂರಿದೆ ಎಂಬುದನ್ನು ಸಂಶಯಕ್ಕೆಡೆಯಿಲ್ಲದಂತೆ ಬಯಲುಗೊಳಿಸಿದೆ ಇದು ಕಮ್ಯೂನಿಸ್ಟರ ವಿಚಾರಗಳಿಗೆ ಮತ್ತು ಪ್ರಜ್ಞೆಗೆ ಸಂಪೂರ್ಣವಾಗಿ ತ್ಯಾಜ್ಯವಾದ ಪರಿವೀಕ್ಷಣೆ ಸಿ. ಪಿ ಐ.ನ ರಾಷ್ಟ್ರೀಯತೆಯಲ್ಲಿ ಧಾರ್ಮಿಕತೆಗೆ ಸ್ಥಾನವಿಲ್ಲ ಯಾಕೆಂದರೆ ಅದು

ಕಮ್ಯೂನಿಸ್ಟರ ವಿರುದ್ಧ ಶೌರಿಯ ಆರೋಪಗಳನ್ನು ವಿಶ್ಲೇಷಿಸುವ ಮೊದಲು ಬದಲಾಗುತ್ತಿದ್ದ ಪರಿಸ್ಥಿತಿಗೆ ಅನುಗುಣವಾಗಿ ತಮ್ಮ ನಿಲುವನ್ನು ಕೇವಲ ಕಮ್ಯೂನಿಸ್ಟರು ಮಾತ್ರವೇ ಬದಲಿಸಿಕೊಂಡರೇ, ಬೇರೆ ಯಾರೂ ಬದಲಿಸಿ ಕೊಳ್ಳಲಿಲ್ಲವೇ ಎಂಬುದನ್ನು ನೋಡೋಣ. ಕಾಂಗ್ರೆಸ್ಸು ಕೋಮು ಐಕ್ಯತೆಯ ಪ್ರಶ್ನೆಯ ಮೇಲೆ 1906 ರಲ್ಲಿ ಮುಸ್ಲಿಂ ಲೀಗ್ ಸ್ಥಾಪನೆಯಾದಂದಿನಿಂದಲೇ ತನ್ನ ನಿಲುವನ್ನು ಪ್ರಯೋಗಕ್ಕೀಡು ಮಾಡುತ್ತಾ, ವಿಕಾಸ ಗೊಳಿಸುತ್ತಾ ಬಂತು.

ಎಲ್ಲಾ ಕೋಮುಗಳಿಂದಲೂ ಕ್ರಾಂತಿಕಾರಿಗಳನ್ನು ಆಕರ್ಷಿಸಿಕೊಂಡು ಬಂದಿವೆ; ಮುಂದೆಯೂ ಆಕರ್ಷಿಸಿಕೊಳ್ಳುತ್ತವೆ.

ಶೌರಿಯ ವಾದವನ್ನು ಎತ್ತಿಕೊಳ್ಳೋಣ. ಆತ "ನಾವು ಪರಿಶೀಲಿಸುತ್ತಿರುವ ಅವಧಿಯ ವರೆಗೆ ಭಾರತ ಒಂದು ದೇಶವಾಗಿದೆ ಮತ್ತು ಮುಸ್ಲಿಂ ಲೀಗಿನ ನಾಯಕತ್ವ ಊಳಿಗಮಾನ್ಯ ಪ್ರತಿಕ್ರಿಯಾವಾದಿ" ಯಾಗಿದೆ ಹಾಗೂ ನಾಯಕತ್ವ ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ವಂಚಿತಗೊಂಡಿರುವ ಮುಸ್ಲಿಂ ಜನಸಾಮಾನ್ಯರ ಮೇಲೆ ತನ್ನ ಹಿಡಿತವನ್ನು ಭದ್ರಗೊಳಿಸಲು ಕೋಮುವಾದಕ್ಕೆ ಗಾಳಿಹಾಕುತ್ತದೆ, ಎಂದು ಕಮ್ಯೂನಿಸ್ಟ್ ಪಕ್ಷ ಹೇಳುತ್ತಾ ಬಂದಿತ್ತು ಎಂದು ಆಮೇಲೆ ಭಾರತದಲ್ಲಿ ಹಿಂದೂ–ಮುಸ್ಲಿಂ ಕುರಿತಾದ ಸಮಸ್ತ ಪ್ರಶ್ನೆಯ ತನ್ನ "ವಿಶಿಷ್ಟ" ಅರಿವಿಗನುಗುಣವಾಗಿ ಈ ಪ್ರಶ್ನೆ ಕುರಿತಾದ ಸಿ.ಪಿ.ಐ.ನ ಹೊಸ ಸಿದ್ಧಾಂತದಲ್ಲಿ ಸಾರಾಂಶ ಕೊಡಲು ಅನುವಾಗುತ್ತಾರೆ. ಅದು 1942-43ರಲ್ಲಿ 'ಬೇರೆ ದಾರಿ' ಹಿಡಿಯಲು ರಾಷ್ಟ್ರೀಯ ಪ್ರಶ್ನೆಯ ಬಗ್ಗೆ ಸ್ಟಾಲಿನ್ನರ ಸಿದ್ಧಾಂತಗಳ ನಕಲು ಮಾಡಿದ್ದೇ ಕಾರಣ ಎಂದು ಆತ ಕಂಡು ಹಿಡಿಯುತ್ತಾರೆ. ಹೀಗೆ ಮಾಡುವ ಭರದಲ್ಲಿ ಶೌರಿ 1930 ರ ದಶಕದ ಆರಂಭದಿಂದಲೇ ಸ್ಟಾಲಿನ್ನರ ಈ ಸಿದ್ಧಾಂತಗಳನ್ನು ಚೆನ್ನಾಗಿ ಬಲ್ಲವರಾಗಿದ್ದ ಕಮ್ಯೂನಿಸ್ಟರು ಅದನ್ನು ಮೊದಲೇ ಸಾಲ ತರದೆ 1942-43 ರಲ್ಲಷ್ಟೇ ಏಕೆ "ಎಗೆದು ತೆಗೆದರು" ಎಂಬ ಪ್ರಶ್ನೆಯನ್ನು ತನಗೇ ಹಾಕಿಕೊಳ್ಳುವ ಗೋಜಿಗೇ ಹೋಗುವುದಿಲ್ಲ !

ತುರ್ತಿನ ಸನ್ನಿವೇಶ

ಜಗತ್ತು ಆಗ ಒಂದು ಭಯಾನಕ ಭೂಮಂಡಲ ವ್ಯಾಪೀ ಯುದ್ಧದ ನಡುವಿನಲ್ಲಿದ್ದು, ರಣರಂಗದ ಒಂದು ಮಗ್ಗುಲಿಗೆ ಫ್ಯಾಸಿಸ್ಟ್ ಅಕ್ಷಕೂಟ ನಿಂತಿದ್ದು, ಇನ್ನೊಂದು ಮಗ್ಗುಲಲ್ಲಿ ಅದಕ್ಕೆದುರಾಗಿ ಫ್ಯಾಸಿಸ್ಟ್ ವಿರೋಧಿ ಶಕ್ತಿಗಳು ನಿಂತಿದ್ದ ಸಂದರ್ಭದಲ್ಲಿ ಈ ಫ್ಯಾಸಿಸ್ಟ್ ವಿರೋಧೀ ಯುದ್ಧದಲ್ಲಿ ಭಾರತ ಪರಿಣಾಮಕಾರಿಯಾಗಿ ಭಾಗವಹಿಸ ಬೇಕಾದುದು ಬಹಳ ತುರ್ತಿನ ಸಂಗತಿಯಾಗಿತ್ತು. ಇದರ ಜತೆಗೆ ಕಾಂಗ್ರೆಸ್ ಮತ್ತು ಲೀಗಿನ ಒಂದು ರಾಷ್ಟ್ರೀಯ ಸರ್ಕಾರದ ಸ್ಥಾಪನೆಯ ತುರ್ತು ಅವಶ್ಯಕತೆಯೂ ಇತ್ತು. ಈ ಸಂಗತಿ ಕಾಂಗ್ರೆಸ್–ಲೀಗ್ ಐಕ್ಯತೆಗಾಗಿ ದೇಶದ ವಿವಿಧ ರಾಜಕೀಯ ಪಕ್ಷಗಳು ಹೊಸ ಸೂತ್ರಗಳನ್ನು ಕಂಡುಹಿಡಿಯುವಂತೆ ಒತ್ತಾಯದ ವಾತಾವರಣ ಸೃಷ್ಟಿಸಿತು.

ವಿದೇಶೀ ಬ್ರಿಟಿಶ್ ಆಳ್ವಿಕೆಯ ವಿರುದ್ಧ, ಹಿಂದೂ–ಮುಸ್ಲಿಂ ಐಕ್ಯತೆಯ ಈ ಮೂಲ ಕಾಣಲಾರದ ಸಮಸ್ಯೆಯನ್ನು ಕುರಿತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಅದರ ಕಾರ್ಯಕಾರೀ ಸಮಿತಿ ಹಲವು ದಶಕಗಳಲ್ಲಿ ವಿಭಿನ್ನ ಧೋರಣೆಗಳ ಮೂಲಕ ಹಾದು ಬರಬೇಕಾಗಿ ಬಂದಿತ್ತು. 1920 ರ ದಶಕದ ಆರಂಭದ ವರ್ಷಗಳಲ್ಲಿನ ಖಿಲಾಫತ್ ಪ್ರಯೋಗ, 1916 ರ ಕಾಂಗ್ರೆಸ್–ಮುಸ್ಲಿಂ ಲೀಗ್ ಸಂಧಿ, ನಂತರದ ಒಂದಷ್ಟು ಹೆಜ್ಜೆ, ಪ್ರತಿ–ಹೆಜ್ಜೆಗಳು ಮತ್ತು ಅವರಿಂದಾಗಿ 1946-47 ರಲ್ಲಿ ನಡೆದ ದೇಶದ ದುರಂತಾತ್ಮಕ ವಿಭಜನೆ ಇವೆಲ್ಲಾ ಎಲ್ಲರೂ ಬಹಳವಾಗಿ ಅಪೇಕ್ಷಿಸುತ್ತಿದ್ದ ಹಿಂದೂ-ಮುಸ್ಲಿಂ ಐಕ್ಯತೆಯನ್ನು "ಹೇಗಾದರೂ" ಸಾಧಿಸುವ ಪ್ರಯತ್ನಗಳು.

ಕಾಂಗ್ರೆಸ್ಸಿನ ನಿಲುವುಗಳು

ಕಮ್ಯೂನಿಸ್ಟರ ವಿರುದ್ಧ ಶೌರಿಯ ಆರೋಪಗಳನ್ನು ವಿಶ್ಲೇಷಿಸುವ ಮೊದಲು ಬದಲಾಗುತ್ತಿದ್ದ ಪರಿಸ್ಥಿತಿಗೆ ಅನುಗುಣವಾಗಿ ತಮ್ಮ ನಿಲುವೆಯನ್ನು ಕೇವಲ ಕಮ್ಯೂನಿಸ್ಟರು ಮಾತ್ರವೇ ಬದಲಿಸಿಕೊಂಡರೇ, ಬೇರೆ ಯಾರೂ ಬದಲಿಸಿಕೊಳ್ಳಲಿಲ್ಲವೇ ಎಂಬುದನ್ನು ನೋಡೋಣ. ಕಾಂಗ್ರೆಸ್ ಕೋಮು ಐಕ್ಯತೆಯ ಪ್ರಶ್ನೆಯ ಮೇಲೆ 1906 ರಲ್ಲಿ ಮುಸ್ಲಿಂ ಲೀಗ್ ಸ್ಥಾಪನೆಯಾದಂದಿನಿಂದಲೇ ತನ್ನ ನಿಲುವೆಯನ್ನು ಪ್ರಯೋಗಕ್ಕೀಡು ಮಾಡುತ್ತಾ ಬಂತು ಮತ್ತು ಅದನ್ನು ವಿಕಾಸಗೊಳಿಸುತ್ತಾ ಬಂತು.

ಈ ಪ್ರಶ್ನೆಯ ಬಗ್ಗೆ ಗಾಂಧಿಯ ಹೇಳಿಕೆಗಳನ್ನು ಉದಾಹರಿಸೋಣ.

ಕಾಂಗ್ರೆಸ್ ಒಂದು ಹಿಂದೂ ಸಂಘಟನೆಯೇ ಎಂಬ ಪ್ರಶ್ನೆಯನ್ನು ಉತ್ತರಿಸುತ್ತಾ ಗಾಂಧಿ "ಜೀವನವಾಗಲೀ, ಸಂಸ್ಥೆಗಳಾಗಲೀ ತರ್ಕಕ್ಕೆ ಒಳಗಾಗಿ ನಡೆಯುವುದಿಲ್ಲ. ದೇಶದ ರಾಜಕೀಯ ಮುನ್ನಡೆಗಾಗಿ ಕೋಮು ಹೊಂದಾಣಿಕೆ ಅಗತ್ಯವೆಂದು ಕಾಂಗ್ರೆಸ್ಸಿಗೆ ಅನಿಸಿತು. ಅದರಿಂದಾಗಿ 1916 ರ ಕಾಂಗ್ರೆಸ್–ಲೀಗ್ ಸಂಧಿ ಹುಟ್ಟಿತು ಎಂಬುದು ಸ್ವಯಂವೇದ್ಯ. ಅಂದಿನಿಂದಲೇ ಕಾಂಗ್ರೆಸ್ ತನ್ನ ಕಾರ್ಯಕ್ರಮಗಳಲ್ಲಿ ಕೋಮು ಐಕ್ಯತೆಯನ್ನು ಒಂದು ಪ್ರಧಾನ ಅಂಶವಾಗಿ ಮಾಡಿಕೊಂಡಿತು" ಎಂದು ಬರೆದರು. ["ಹರಿಜನ್" ನವಂಬರ್ 18 1939]

ಆದರೆ ಅದೇ ವರ್ಷದ ಜನವರಿ ತಿಂಗಳಲ್ಲಿ "ಹರಿಜನ್" ನಲ್ಲಿ ಹಿಂದೂ–ಮುಸ್ಲಿಂ ಏಕತೆಯ ಬಗ್ಗೆ ಬರೆಯುತ್ತಾ ಗಾಂಧಿಗೆ ಕಂಡು ಬಂದ ಅಂಶಗಳು ಈ ಎರಡು ಕೋಮುಗಳು ತಮ್ಮನ್ನು ಯಾವ ಎರಡು ಪ್ರಮುಖ ರಾಜಕೀಯ ಶಕ್ತಿಗಳೊಂದಿಗೆ ಗುರುತಿಸಿಕೊಂಡಿದ್ದವೋ ಆ ರಾಜಕೀಯ ಶಕ್ತಿಗಳ ನಡುವಿನ ಅಗಲವಾದ ಕಂದರವನ್ನು ಪ್ರತಿಫಲಿಸಿದ್ದವು— "ಮುಸ್ಲಿಂ ಲೀಗ' ಒಂದು ಮಹಾನ್' ಸಂಘಟನೆ. ಅದರ ಅಧ್ಯಕ್ಷ ಒಂದೊಮ್ಮೆ ಶ್ರದ್ಧಾವಂತ ಕಾಂಗ್ರೆಸ್ಸಿಗರಾಗಿದ್ದರು. ಅವರು ಕಾಂಗ್ರೆಸ್ಸಿನ ಉದಿಯಮಾನ ಭರವಸೆಯಾಗಿದ್ದರು.... ಮುಸ್ಲಿಂ ಲೀಗ್ ನಲ್ಲಿ ಸ್ಮರಣೀಯ ಖಿಲಾಫತ್ ದಿನಗಳಲ್ಲಿ ಹೃದಯ ಪೂರ್ವಕವಾಗಿ ಕಾಂಗ್ರೆಸ್ಸಿನ ಜೊತೆಗಿದ್ದ ಹಲವು ಸದಸ್ಯರಿದ್ದಾರೆ. ಹಿಂದಿನ ಈ ಸಂಗಾತಿಗಳ ಹೃದಯದಲ್ಲಿ ತಮ್ಮ ನಿನ್ನೆಯ ಸಹಕಾರ್ಯಕರ್ತರ ಬಗ್ಗೆ ಇಂದು ಅವರ ಭಾಷಣಗಳು, ಬರವಣಿಗೆಗಳು ತೋರಿಸಿಕೊಡಬಹುದಾದಷ್ಟು ಕಹಿ ತುಂಬಿರಬಹುದೆಂದು ಯೋಚಿಸಲು ನಾನು ನಿರಾಕರಿಸುತ್ತೇನೆ. ಆದ್ದರಿಂದ ಕಾಂಗ್ರೆಸ್ಸಿಗರಾಗಲೀ ಮತ್ತು ಕಾಂಗ್ರೆಸ್ಸಿನ ಅಂಗ ಸಂಘಟನೆಗಳಾಗಲೀ ಲೀಗ್ ಅಥವಾ ಅದರ ಸದಸ್ಯರ ವಿರುದ್ಧ ವೈಯಕ್ತಿಕವಾಗಿ ಕಹಿಭಾವನೆ ವ್ಯಕ್ತಪಡಿಸುವುದು ತಪ್ಪು.

'ಹಿಂದೂ ಮತ್ತು ಮುಸ್ಲಿಮರು ಮಾತ್ರವಲ್ಲ, ಭಾರತವನ್ನು ಒಂದು ದೇಶವನ್ನಾಗಿ ಮಾಡಿರುವ ಎಲ್ಲಾ ಕೋಮುಗಳ ನಡುವೆ ನಿಜವಾದ ಐಕ್ಯತೆಯನ್ನೂ ಕಾಣಲು ನಾನು ಬದುಕಿರುತ್ತೇನೆ. ಎನ್ನುವುದರ ಬಗ್ಗೆ ನಾನಿನ್ನೂ ಆಸೆ ಕಳಕೊಂಡಿಲ್ಲ. ಇಂದು ಅದನ್ನು ಸಾಧಿಸುವ ಮಾರ್ಗ ನನಗೆ ತಿಳಿದಿದೆಯೆಂದಾದರೆ ಅದೆಷ್ಟೇ ಕಷ್ಟಕರ ಹಾಗೂ ಮುಳ್ಳು— ಕಲ್ಲುಗಳಿಂದ ತುಂಬಿದ್ದರೂ ಅದನ್ನು ಪಡೆಯುವ ಇಚ್ಛೆ ಮತ್ತು ಸಾಮರ್ಥ್ಯ ನನಗಿದೆಯೆಂದು ತಿಳಿಯುತ್ತೇನೆ" ಎಂದು ಬರೆದಿದ್ದರು ಗಾಂಧಿ

"ವಿಭಜನೆ ಕೇಳಬಹುದು"

1940ರ ಮಾರ್ಚ್ ಹೊತ್ತಿಗೆ ಭಾರತದ ವಿಭಜನೆಯ ವಾಸ್ತವತೆಯನ್ನು ಗಾಂಧಿ ಎದುರಿಸ ಬೇಕಾಗಿ ಬಂದಿತ್ತು. ಆಗ ಅವರು ಗಮನಿಸಿದ ಅಂಶಗಳಿವು—"ಆದರೆ ಇಷ್ಟೇ ಅಲ್ಲ. ಕಾಂಗ್ರೆಸ್ ಮುಸ್ಲಿಮರು ಅಥವಾ ಯಾವುದೇ ಅಲ್ಪಸಂಖ್ಯಾತರನ್ನು ಬಲವಂತ ಮಾಡುವುದಿಲ್ಲ. ಅದು ಅಹಿಂಸಾತ್ಮಕ ಧೋರಣೆ ಆಗುವುದಿಲ್ಲ. ಅತ್ಯಂತ ದೊಡ್ಡ ಬಲವಂತವೆಂದರೆ ಬ್ರಿಟಿಶರ ಬಲವಂತ. ಒಂದು ಸಂವಿಧಾನ ಸಭೆ ಬಯಸುವಲ್ಲಿ ನನ್ನ ಆಸೆಯೇನೆಂದರೆ ಮುಸ್ಲಿಂಮರನ್ನು ಮುಸ್ಲಿಂ ಲೀಗ್ ನ ಮಾನಸಿಕತೆ ಪ್ರತಿನಿಧಿಸುತ್ತದೆಯೋ ಎಂದು ತಿಳಿಯುವುದು. ಯಾಕೆಂದರೆ ಪ್ರತಿನಿಧಿಗಳು ವಾಸ್ತವತೆಯನ್ನು ಎದುರಿಸಬೇಕಾಗಿ ಬಂದಾಗ ಭಾರತವನ್ನು ಧರ್ಮಗಳಿಗನುಸಾರವಾಗಿ ತುಂಡರಿಸುವ ಯೋಚನೆಯನ್ನು ಅವರು ಮಾಡುವುದಿಲ್ಲ. ಬದಲಿಗೆ ಭಾರತವನ್ನು ಅವಿಭಾಜ್ಯ ಎಂದು ಪರಿಗಣಿಸಿ ವಿಶಿಷ್ಟವಾದ ಮುಸ್ಲಿಂ ಪ್ರಶ್ನೆಗಳಿಗೂ ಒಂದು ರಾಷ್ಟ್ರೀಯ ಅಂದರೆ ಭಾರತೀಯ ಪರಿಹಾರ ಕಂಡು ಹಿಡಿಯುತ್ತಾರೆ. ಆದರೆ ಈ ಆಸೆ ಕೈಗೂಡದಂತಾದರೆ ಭಾರತದ ಮುಸ್ಲಿಮರ ಸ್ಪಷ್ಟವಾಗಿ ಅಭಿವ್ಯಕ್ತಗೊಂಡ ಇಚ್ಛೆಯನ್ನು ಬಲವಂತದಿಂದ ಎದುರಿಸುವುದು ಕಾಂಗ್ರೆಸ್ಸಿಗೆ ಸಾಧ್ಯವಿಲ್ಲ. ದೇಶವನ್ನು ತುಂಡರಿಸುವುದನ್ನು ತಡೆಯಲು ಕಾಂಗ್ರೆಸ್ ಬ್ರಿಟಿಶ್ ಸೇನೆಗಳ ನೆರವು ಕೇಳುವುದಿಲ್ಲ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕಾಂಗ್ರೆಸ್ ನನ್ನ ಮಾತು ಕೇಳುವಂತೆ ಮಾಡಲು ನನಗೆ ಸಾಧ್ಯವಿದ್ದರೆ ಮುಸ್ಲಿಮರಿಗೆ ಬಲ ಉಪಯೋಗಿಸಬೇಕಾದ ತೊಂದರೆ ನಾನು ಕೊಡುವುದಿಲ್ಲ." [ಗಾಂಧಿ, 1940ರ ಮಾರ್ಚ್ 23ರ "ಹರಿಜನ್" ನಲ್ಲಿ]

1940 ರ ಏಪ್ರಿಲ್ ಹೊತ್ತಿಗೆ "ಮುಸ್ಲಿಮರಿಗೆ ಇತರ ಭಾರತೀಯರಿಗಿರುವಂತೆ ಸ್ವಯಂ ನಿರ್ಧಾರದ ಹಕ್ಕು ಇರಲೇಬೇಕು" ಎನ್ನುವುದರ ವಿನಾ ಬೇರೆ ಪರಿಹಾರ ಗಾಂಧಿಗೆ ಕಾಣಲಿಲ್ಲ. "ಹರಿಜನ್" ನಲ್ಲಿ ಅವರು ಬರೆದ ಮಾತುಗಳಿವು– "ಈಗಿನ ಸಂದರ್ಭದಲ್ಲಿ ಇನ್ನು ಮುಂದೆ ಭಾರತ ತನ್ನ ಸ್ವಂತ ಇಚ್ಛೆಗನುಗುಣವಾಗಿ ತನ್ನನ್ನು ಆಳಿಕೊಳ್ಳುತ್ತದೆ, ಇದುವರೆಗೆ ನಡೆದಿರುವಂತೆ ಆಳರಸರ ಇಚ್ಛೆಯಂತೆ ಅಲ್ಲ ಎಂದು ಸ್ಪಷ್ಟ ಮಾತುಗಳಲ್ಲಿ ತಮ್ಮ ಇಚ್ಛೆಯನ್ನು ಸಾಮ್ರಾಜ್ಯ ಶಾಹೀ ಆಳರಸರು ಘೋಷಿಸುವುದನ್ನು ಯಾರೂ ತಡೆಯಲಾರರು. ಮುಸ್ಲಿಂ ಲೀಗ್ ಆಗಲಿ ಅಥವಾ ಬೇರೆ ಯಾವುದೇ ಪಾರ್ಟಿಯಾಗಲಿ ಇಂತಹ ಘೋಷಣೆಯನ್ನು ವಿರೋಧಿಸಲಾರದು. ಯಾಕೆಂದರೆ ಮುಸ್ಲಿಮರಿಗೆ ಆಗ ತಮ್ಮ ಮಾತು ನಡೆಸುವ ಅಧಿಕಾರ ಬರುತ್ತದೆ. ಆಂತರಿಕ ಸೋದರ ಹತ್ಯೆಯನ್ನು ಭಾರತದ ಇತರರು ಆಶಿಸುವುದಿಲ್ಲವಾದರೆ ಮುಸ್ಲಿಮರು ತಮ್ಮ ಮಾತು ನಡೆಯಬೇಕೆಂದು ಹೇಳಿದ ಪಕ್ಷದಲ್ಲಿ ಇತರರು ಅದಕ್ಕೆ ತಲೆ ಬಾಗಲೇ ಬೇಕಾಗುತ್ತದೆ. ಇತರರು ಎಷ್ಟೇ ದೊಡ್ಡ ಬಹುಸಂಖ್ಯಾತರನ್ನು ಪ್ರತಿನಿಧಿಸಿದರೂ ಕೂಡಾ ಅವರ ಇಚ್ಛೆಗೆ ಎಂಟು ಕೋಟಿ ಮುಸ್ಲಿಮರನ್ನು ವಿಧೇಯರಾಗುವಂತೆ ಒತ್ತಾಯಿಸುವ ಯಾವುದೇ ಅಹಿಂಸಾತ್ಮಕ ವಿಧಾನ ನನಗೆ ತಿಳಿದಿಲ್ಲ. ಮುಸ್ಲಿಮರಿಗೆ ಇತರ ಭಾರತೀಯರಿಗಿರುವಂತೆಯೇ ಸ್ವಯಂ ನಿರ್ಧಾರದ ಹಕ್ಕು ಇರಲೇ ಬೇಕು. ಸದ್ಯ ನಾವೊಂದು ಜಂಟೀ ಕುಟುಂಬ. ಯಾವುದೇ ಸದಸ್ಯ ವಿಭಜನೆ ಬೇಕೆಂದು ಕೇಳಬಹುದು."

> ಕಾಂಗ್ರೆಸ್ಸು ಕೂಡಾ ತ್ವರಿತವಾಗಿ ಬದಲಾಗುತ್ತಿದ್ದ ಸ್ಥಿತಿಯೊಂದಿಗೆ ಹೆಜ್ಜೆ ಹಾಕಲು, ಅಷ್ಟೊಂದು ಯಶಸ್ವಿಯಾಗಿ ಅಲ್ಲದಿದ್ದರೂ, ಪ್ರಯತ್ನಿಸುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ. ಮೊತ್ತ ಮೊದಲು 1857 ರ ಬಂಡಾಯದಿಂದ ಆರಂಭವಾಗಿ ವ್ಯಕ್ತಗೊಂಡ ಸಾಮ್ರಾಜ್ಯ ಶಾಹೀ ವಿರೋಧಿ ಭಾವನೆಗಳು ಹಿಂದೂ ಮತ್ತು ಮುಸ್ಲಿಮರನ್ನು ತಮ್ಮಿಬ್ಬರಿಗೂ ಸಾಮಾನ್ಯವಾದ ವೈರಿಯ ವಿರುದ್ಧ ಒಂದಾಗಿಸಿದ್ದು, ಈಗ ಬಹು ಸಂಖ್ಯಾತ ಮತ್ತು ಅಲ್ಪಸಂಖ್ಯಾತ ಹಿತಾಸಕ್ತಿಗಳೊಂದಿಗೆ ಗುರುತಿಸಲ್ಪಟ್ಟ ಎರಡು ಪ್ರತ್ಯೇಕ ಸಂಘಟನೆಗಳ ಮೂಲಕ ರಾಜಕೀಯ ಅಭಿವ್ಯಕ್ತಿ ಪಡೆದವು. ಇದು ಪ್ರತಿಯೊಬ್ಬರೂ ಎದುರಿಸಬೇಕಾಗಿದ್ದ ವಾಸ್ತವಿಕತೆ.

ಕಟು ವಾಸ್ತವಿಕತೆ

"ಹೀಗೆ ನನ್ನ ಮಟ್ಟಿಗೆ ಹೇಳುವುದಾದರೆ ಕೋಮು ಐಕ್ಯತೆಯಿಲ್ಲದೆ ಸ್ವರಾಜ್ಯವಿಲ್ಲ ಎಂಬ ನನ್ನ ಮಂಡನೆ 1919ರಲ್ಲಿ ಅದನ್ನು ಮೊದಲ ಬಾರಿಗೆ ಪ್ರಸ್ತುತಪಡಿಸಿದಾಗ ಎಷ್ಟು ಸರಿಯಾಗಿತ್ತೋ ಅಷ್ಟೇ ಈಗಲೂ ಸರಿಯಾಗಿದೆ." (ಗಾಂಧಿ-"ಹರಿಜನ್" ಏಪ್ರಿಲ್ 6, 1940)

1942ರ ಜುಲೈ 12ರಂದು ಗಾಂಧಿ "ಕಾಂಗ್ರೆಸ್ ಮತ್ತು ಲೀಗ್ ದೇಶದಲ್ಲಿ ಉತ್ತಮ ರೀತಿಯಲ್ಲಿ ಸಂಘಟಿತಗೊಂಡಿರುವ ಪಕ್ಷಗಳಾಗಿರುವುದರಿಂದ ಅವು ಪರಸ್ಪರ ರಾಜಿ ಮಾಡಿಕೊಂಡು ಎಲ್ಲರಿಗೂ ಸ್ವೀಕಾರ್ಯವಾದ ಒಂದು ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಬಹುದು....ಇದರ ಹಿಂದೇನೇ ಒಂದು ಸಂವಿಧಾನ ಸಭೆಯನ್ನು ಸರಿಯಾದ ರೀತಿಯಲ್ಲಿ ಆರಿಸಬಹುದು." ಎಂದು ಹೇಳಿಕೆಯಿತ್ತರು.

1943 ನೇ ನಲ್ಲಿ ಕೂಡಾ ಜಿನ್ನಾಗೆ ಒಂದು ಪತ್ರದಲ್ಲಿ ಇತ್ತ ಹೇಳಿಕೆಯಿದು– "ನೀವು ಮತ್ತು ನಾನು ಕೋಮು ಏಕತೆಯ ಮಹಾನ್ ಪ್ರಶ್ನೆಯನ್ನು ಸರ್ವಸಮಾನ ಪರಿಹಾರವೊಂದನ್ನು ದೊರಕಿಸಿಕೊಳ್ಳಲು ದೃಢ ನಿರ್ಧಾರ ಮಾಡಿರುವ ವ್ಯಕ್ತಿಗಳಾಗಿ ಏಕೆ ಪರಿಶೀಲಿಸಬಾರದು. ಮತ್ತು ನಮ್ಮ ನಿರ್ಣಯ ಸಂಬಂಧಪಟ್ಟ ಅಥವಾ ಆಸಕ್ತಿ ಇರುವ ಎಲ್ಲರಿಗೂ ಸ್ವೀಕಾರಯೋಗ್ಯವಾಗುವಂತೆ ಮಾಡಲು ಇಬ್ಬರೂ ಜತೆಗೆ ಏಕೆ ದುಡಿಯ ಬಾರದು ?"

ಕಾಂಗ್ರೆಸ್ಸು ಕೂಡಾ ತ್ವರಿತವಾಗಿ ಬದಲಾಗುತ್ತಿದ್ದ ಸ್ಥಿತಿಯೊಂದಿಗೆ ಹೆಜ್ಜೆ ಹಾಕಲು, ಅಷ್ಟೊಂದು ಯಶಸ್ವಿಯಾಗಿ ಅಲ್ಲವಾದರೂ, ಪ್ರಯತ್ನಿಸುತ್ತಿತ್ತು. ಮೇಲಿನ ಉದ್ಧರಣೆಗಳಿಂದ ಸ್ಪಷ್ಟವಾಗುತ್ತದೆ. ಮೊತ್ತ ಮೊದಲು 1857 ರ ಬಂಡಾಯದಿಂದ ಆರಂಭವಾಗಿ ವ್ಯಕ್ತಗೊಂಡ ಸಾಮ್ರಾಜ್ಯ ಶಾಹಿ-ವಿರೋಧೀ ಭಾವನೆಗಳು ಹಿಂದೂ ಮತ್ತು ಮುಸ್ಲಿಮರನ್ನು ತಮ್ಮಿಬ್ಬರಿಗೂ ಸಾಮ್ರಾಜ್ಯವಾದಿ ವೈರಿಯ ವಿರುದ್ಧ ಒಂದಾಗಿಸಿದ್ದು, ಈಗ ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಹಿತಾಸಕ್ತಿಗಳೊಂದಿಗೆ ಗುರುತಿಸಲ್ಪಟ್ಟ ಎರಡು ಪ್ರತ್ಯೇಕ ಸಂಘಟನೆಗಳ ಮೂಲಕ ರಾಜಕೀಯ ಅಭಿವ್ಯಕ್ತಿ ಪಡೆದವು. ಇದು ಪ್ರತಿಯೊಬ್ಬನೂ ಎದುರಿಸ ಬೇಕಾಗಿದ್ದ ವಾಸ್ತವಿಕ ಸಂಗತಿ. ಮುಸ್ಲಿಂ ಕೋಮು ಪ್ರಶ್ನೆಯನ್ನು ಒಂದು ರಾಷ್ಟ್ರೀಯ ಜನಾಂಗದ ಪ್ರಶ್ನೆಯಾಗಿ ಪ್ರಯತ್ನಿಸುತ್ತಾ ಸಿ.ಪಿ.ಐ.

(6ನೇ ಪುಟ ನೋಡಿ)

ಸೆಪ್ಟೆಂಬರಿನಲ್ಲಿ ರೈತರ ಮಹಾಪ್ರದರ್ಶನ

ಕರ್ನಾಟಕ ಪ್ರಾಂತ ರೈತ ಸಂಘದ ಕರೆಯ ಮೇರೆಗೆ ಜೂನ್ 11 ರಂದು ರಾಜ್ಯಾದ್ಯಂತ 50 ಸಾವಿರಕ್ಕೂ ಮೇಲ್ಪಟ್ಟ ರೈತರು, ಕೃಷಿ ಕಾರ್ಮಿಕರು, ಇತರ ಕಾರ್ಮಿಕರು ಪಿಕೆಟಿಂಗ್, ಪ್ರದರ್ಶನಗಳಲ್ಲಿ ಭಾಗವಹಿಸಿ, 25 ಸಾವಿರಕ್ಕೂ ಮೇಲ್ಪಟ್ಟು ಬಂಧನಕ್ಕೊಳಗಾಗಿ, ತಮ್ಮ ಬೇಡಿಕೆಗಳನ್ನು ಪಡೆಯಲು ಎಂಥ ತೀವ್ರ ಹೋರಾಟಗಳನ್ನು ಮಾಡಲು, ಎಂಥ ದಬ್ಬಾಳಿಕೆಗಳನ್ನೆದುರಿಸಲು ಸಿದ್ಧ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ರೈತರ, ಕೃಷಿ ಕಾರ್ಮಿಕರ ಹೋರಾಟದಲ್ಲಿ ತಾವೂ ಪಾಲ್ಗೊಂಡು ಸಂಪೂರ್ಣ ಬೆಂಬಲ ನೀಡುತ್ತೇವೆಂಬುದನ್ನು ಕರ್ನಾಟಕ ರಾಜ್ಯದ ಸಿಐಟಿಯುವಿಗೆ ಸೇರಿದ ಕಾರ್ಮಿಕರೂ ಜೂನ್ 11 ರ ಕಾರ್ಯಕ್ರಮದಲ್ಲಿ ತೋರಿಸಿ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದ ರೈತ-ಕಾರ್ಮಿಕರೆಲ್ಲ ಜಂಟಿಯಾಗಿ ಕಾರ್ಯಕ್ರಮ ನಡೆಸಿ, ತಮ್ಮ ಐಕ್ಯತೆ ಪ್ರದರ್ಶಿಸಿದ್ದಕ್ಕಾಗಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕಾರಿಣಿ ಸಭೆ ಅಭಿನಂದನೆಗಳನ್ನು ಸಲ್ಲಿಸಿದೆ.

ಚುನಾವಣೆಯ ಸಮಯದಲ್ಲಿ ರೈತರಿಗೆ, ಸಾರ್ವಜನಿಕರಿಗಿತ್ತ ಆಶ್ವಾಸನೆಗಳನ್ನು ಕಾರ್ಯರೂಪದಲ್ಲಿ ತರುವಲ್ಲಿ ವಿಳಂಬ ಧೋರಣೆಯನ್ನನುಸರಿಸುತ್ತಿರುವ, ಕೆಲವು ಬೇಡಿಕೆಗಳ ಕುರಿತು ನಿರಾಸಕ್ತಿ ತೋರಿಸುತ್ತಾ ಇನ್ನೂ ಕೆಲವು ಬೇಡಿಕೆಗಳನ್ನು ವಿರೋಧಿಸುತ್ತಿರುವ ಜನತಾ ಸರಕಾರದ ಮೇಲೆ ಹೆಚ್ಚು ಒತ್ತಾಯ ತರುವ ದೃಷ್ಟಿಯಿಂದ ಇದೇ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ವಿಧಾನ ಸೌಧಕ್ಕೆ ಕಾಲ್ನಡಿಗೆಯ ಜಾಥಾ ಒಯ್ಯಬೇಕೆಂದೂ, ಅದಕ್ಕೆ ಪೂರ್ವಭಾವಿಯಾಗಿ ಪ್ರತಿಯೊಂದು ಜಿಲ್ಲಾ, ತಾಲ್ಲೂಕ್ ಕೇಂದ್ರಗಳಲ್ಲಿ ಸಭೆ, ಮೆರವಣಿಗೆ, ಮತಪ್ರದರ್ಶನ, ಕಾಲ್ನಡಿಗೆ ಜಾಥಾಗಳನ್ನು ನಡೆಸಿ ರೈತ ಸಂಘದ ಬೇಡಿಕೆಗಳ ಕುರಿತು ಗ್ರಾಮಾಂತರ ರೈತರಲ್ಲಿ ಜಾಗೃತಿಯನ್ನುಂಟುಮಾಡಿ, ಅವರೆಲ್ಲ ರೈತ ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಬೇಕೆಂದೂ ನಿರ್ಣಯಿಸಲಾಯಿತು.

1983-84 ನೇ ವರ್ಷಕ್ಕಾಗಿ 73,000 ಸದಸ್ಯರನ್ನು ನೋಂದಾಯಿಸಿದ್ದು, ಬೆಳೆದು ಬರುತ್ತಿರುವ ಹೋರಾಟದ ಹಿನ್ನೆಲೆಯಲ್ಲಿ 85-85 ನೇ ವರ್ಷಕ್ಕಾಗಿ 1, 75,000 ಸದಸ್ಯರನ್ನು ನೋಂದಾಯಿಸಲು ತೀರ್ಮಾನಿಸಲಾಯಿತು. ಸೈದ್ಧಾಂತಿಕ ಶಿಕ್ಷಣ ಕಾರ್ಯಕರ್ತರಿಗೆ ಕೊಟ್ಟು ಅವರೆಲ್ಲ ಹೆಚ್ಚು ಆಸಕ್ತಿಯಿಂದ ಸಂಘಟನೆ ಮತ್ತು ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮಾಡಲು ಶಿಬಿರ ನಡೆಸಬೇಕೆಂದೂ ನಿರ್ಧರಿಸಲಾಯಿತು.

ಈ ಸಭೆಗೆ ಅಖಿಲ ಭಾರತ ಕಿಸಾನ್ ಸಭೆಯ ಉಪಾಧ್ಯಕ್ಷರಾದ ಕಾ. ಹರ್ ಕಿಶನ್‌ಸಿಂಗ್ ಸೂರಜಿತ್ ಅವರು ಆಗಮಿಸಿ ರೈತ ಸಂಘದ ಮುಂದಿರುವ ಸಮಸ್ಯೆಗಳನ್ನೂ, ಅವುಗಳ ಪರಿಹಾರಕ್ಕಾಗಿ ನಡೆಸಬೇಕಾದ ಹೋರಾಟಗಳ ಸ್ವರೂಪವನ್ನೂ ವಿವರಿಸಿ, ಈಗ ಛಿದ್ರಕಾರಿ ಶಕ್ತಿಗಳು ದೇಶವನ್ನು ವಿಭಜಿಸುವ ತೀವ್ರ ಹಂಚಿಕೆಯಲ್ಲಿವೆಂದೂ, ಇಂದಿರಾ ಗಾಂಧಿ ಅವುಗಳನ್ನು ತಡೆದು ದೇಶದ ಸಮಗ್ರತೆಯನ್ನು ಕಾಪಾಡಲು ಅಸಮರ್ಥರಾಗಿದ್ದಾರೆಂದೂ, ಆದ್ದರಿಂದ ಬಲಿಷ್ಠವಾದ ರೈತ-ಕೃಷಿ ಕಾರ್ಮಿಕರ ಸಂಘ ಕಟ್ಟಿ ಐಕ್ಯ ಹೋರಾಟ ನಡೆಸಿದರೆ ಮಾತ್ರ ಉಗ್ರಗಾಮಿ, ಜಾತೀಯ, ಮತೀಯ ಶಕ್ತಿಗಳನ್ನೆಲ್ಲ ಸರಿಯಾಗಿ ಎದುರಿಸಲು ಸಾಧ್ಯವೆಂದೂ ಹೇಳಿ, ಪಂಜಾಬಿನಲ್ಲಿ ನಮ್ಮ ರೈತ ಸಂಘ ಯಾವ ರೀತಿ ಉಗ್ರಗಾಮಿಗಳ, ಛಿದ್ರಕಾರಿ ಶಕ್ತಿಗಳ ವಿರುದ್ಧ ಸತತ ಹೋರಾಡುತ್ತಿದೆಂದೂ ಎಷ್ಟು ಜನ ಅಂಥ ಹೋರಾಟದಲ್ಲಿ ಉಗ್ರಗಾಮಿಗಳಿಗೆ ಬಲಿಯಾಗಿದ್ದಾರೆ ತಿಳಿಸಿ, ನಮ್ಮ ಪ್ರಯತ್ನದಿಂದಾಗಿ ಹಿಂದೂ-ಸಿಖ್ ಐಕ್ಯತೆ ಕಾಪಾಡಲು ಸಾಧ್ಯವಾಗಿದೆಂದು ವಿವರಿಸಿದರು,

ಜೂನ್ 11 ನೇ ತಾರೀಕಿನ ಹೋರಾಟದ ಅನುಭವಗಳನ್ನು ಕ್ರೋಢೀಕರಿಸಿ ಸೆಪ್ಟಂಬರಿನಲ್ಲಿ ಹೊರಡಿಸಲಿರುವ ಬೃಹತ್ ಜಾಥಾಗೆ ಎಲ್ಲಾ ಸಿದ್ಧತೆ ಮಾಡಬೇಕೆಂದೂ, ಹೆಚ್ಚು ರೈತ-ಕೃಷಿ ಕಾರ್ಮಿಕರೆಲ್ಲ ಆ ಚಳುವಳಿಗಳಲ್ಲಿ ಭಾಗವಹಿಸುವಂತೆ ಮಾಡಬೇಕೆಂದೂ ಪ್ರಾಂತ ರೈತ ಸಂಘ ಕರೆ ಕೊಡುತ್ತದೆ.

ರಾಯಚೂರು ಜಿಲ್ಲೆ.

ಜುಲೈ 28, 29 ಜಿಲ್ಲಾ ರೈತ ಸಮ್ಮೇಳನ

3-7-84 ರಂದು ಕರ್ನಾಟಕ ಪ್ರಾಂತ ರೈತ ಸಂಘ ರಾಯಚೂರ ಜಿಲ್ಲಾ ಸಮಿತಿಯ ಸಭೆ ಸಿಂಧನೂರಲ್ಲಿ ಸೇರಿತು. ಜೂನ್ ಹನ್ನೊಂದರ ರಾಜ್ಯ ಸಮಿತಿಯ ಕರೆಯನ್ನು ಜಿಲ್ಲೆಯಲ್ಲಿ ಯಶಸ್ವಿಗೊಳಿಸಿದ ತಾಲೂಕ್ ಸಮಿತಿಗಳನ್ನು ಶ್ಲಾಘಿಸಲಾಯಿತು. ಈ ಸ್ಫೂರ್ತಿಯನ್ನು ಮುಂದೆ ಕೊಂಡೊಯಿತು. ವಸತಿ, ಭೂಮಿ, ಗ್ರಾಮಾಭಿವೃದ್ಧಿ ಯೋಜನೆ ಸಾಲವನ್ನು ಪಡೆಯುವಂತಾಗಲು ತೀವ್ರ ಚಳುವಳಿಗೆ ತಯಾರಿ ಮಾಡಲು ಕರೆಕೊಡಲಾಯಿತು. ಜೂನ್ ಹನ್ನೊಂದರಂದು ಸುಮಾರು ಹತ್ತು ಸಾವಿರದಷ್ಟು ರೈತ, ಕೃಷಿಕಾರ್ಮಿಕ ಚಳುವಳಿಯಲ್ಲಿ ಭಾಗವಹಿಸಿದ್ದನ್ನು ವಿಮರ್ಶಿಸಿ ಜಿಲ್ಲಾ ಸಮಿತಿಯ ಅಂದಾಜಿಗಿಂತಲು ಹೆಚ್ಚಿನ ಜನರು ಭಾಗವಹಿಸಿದ್ದನ್ನು ಗುರುತಿಸಲಾಯಿತು ಮುಂದಿನ ಕಾರ್ಯಕ್ರಮ ನಿರ್ಧರಿಸಲು ಜುಲೈ 28, 29 ರಂದು ರೈತ ಸಂಘದ ಜಿಲ್ಲಾ ಸಮ್ಮೇಳನ ಸೇರುತ್ತದೆ.

ದೇವದುರ್ಗಾ ತಾಲೂಕ್ ರೈತ ಸಮ್ಮೇಳನ

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ರೈತ ಸಮ್ಮೇಳನ ಮಸರಿಕಲ್ ಗ್ರಾಮದಲ್ಲಿ ನಡೆಯಿತು. 150 ಪ್ರತಿನಿಧಿಗಳು ಭಾಗವಹಿಸಿದ್ದರು. ಚಂದ್ರಶೇಖರ ಬಾಳೆ, ವೈ. ರಾಮಣ್ಣ ಮೊದಲಾದವರು ರೈತ ಸಮ್ಮೇಳನ ಕುರಿತು ಭಾಷಣ ಮಾಡಿ, ರೈತರ-ಕೃಷಿ ಕಾರ್ಮಿಕರ ಹೋರಾಟ ಬಲಿಷ್ಠಗೊಳಿಸಬೇಕೆಂದು ಕರೆ ನೀಡಿದರು.

ರಾಜಶೇಖರಬಾಳೆ ಅಧ್ಯಕ್ಷ, ಕಾಶೀನಾಥ, ಚನ್ನನಗೌಡ ಉಪಾಧ್ಯಕ್ಷ. ದೇವೇಂದ್ರಪ್ಪ ಪತ್ತಾರ ಮತ್ತು ವೈ. ರಾಮಣ್ಣ ಕಾರ್ಯದರ್ಶಿಗಳಾಗಿರುವ 25 ಜನರ ತಾಲೂಕ್ ಕಮಿಟಿ ಆರಿಸಲಾಯಿತು.

[5ನೇ ಪುಟದಿಂದ]

ಕಾಂಗ್ರೆಸ್-ಲೀಗ್ ಐಕ್ಯತೆಯಿಂದ ಮಾತ್ರ ಬ್ರಿಟಿಶ್ ಆಳರಸರ ಕೈಯಿಂದ ಅವರು ಬಯಸಿದ್ದರೂ ಒಂದು ರಾಷ್ಟ್ರೀಯ ಸರಕಾರವನ್ನು ಕಿತ್ತುಕೊಳ್ಳಲು ಸಾಧ್ಯ ಎಂದು ಭಾವಿಸಿ ಈ ಐಕ್ಯತೆಗಾಗಿ ಶಕ್ತಿಮೀರಿ ಪ್ರಯತ್ನಿಸುತ್ತಿದ್ದರೂ, ಜತೆಗೆ ಮುಸ್ಲಿಂ ಜನತೆಯನ್ನು ಧಾರ್ಮಿಕ ವೇದಿಕೆಯೊಂದರ ಆಧಾರದಲ್ಲಿ ಒಗ್ಗೂಡಿಸುವ ಲೀಗ್‌ನ ಸುವ್ಯಕ್ತ ಕಾರ್ಯಕ್ರಮವನ್ನು ಟೀಕಿಸುತ್ತಿತ್ತು. ಆದರೆ ಅದು ಅಲ್ಪಸಂಖ್ಯಾತರನ್ನು ಒಗ್ಗೂಡಿಸುವಲ್ಲಿ ಅದರ ಯಶಸ್ಸನ್ನು ಒಂದು "ರಾಷ್ಟ್ರೀಯತೆ"ಯ ಪ್ರಜ್ಞೆ ಮೂಡುತ್ತಿದ್ದುದರ ಅಭಿವ್ಯಕ್ತಿ ಎಂದು ತಪ್ಪಾಗಿ ವ್ಯಾಖ್ಯಾನಿಸಿತು.

ಶೌರಿಯ ಆತ್ಮ ಸಂತೃಪ್ತಿ

ತನ್ನ ತಪ್ಪು ನಿಲುವನ್ನು ಆತ್ಮವಿಮರ್ಶಾತ್ಮಕವಾಗಿ ಪರಿಶೀಲಿಸುವಲ್ಲಿ ಸಿಪಿಐ ತನ್ನ ಈ ತಪ್ಪು ಅರಿವಿನ ಹಿಂದೆ ಇದ್ದ ಮೂರ್ತ ಪರಿಸ್ಥಿತಿಗಳ ವಿಶ್ಲೇಷಣೆ ನಡೆಸಿತು. ಈ ರೀತಿ ತನ್ನ ನಿಲುವನ್ನು ಅದು ತಿದ್ದಿಕೊಂಡಿತು. ಈ ನಿಲುವನ್ನು ರಾಷ್ಟ್ರೀಯತೆಯ ಪ್ರಶ್ನೆಯ ಬಗ್ಗೆ ಸ್ಟಾಲಿನ್ನರ ಬರವಣಿಗೆಗಳಿಂದ ಅಧ್ಯಾಯಗಳನ್ನು ಮತ್ತು ಪರಿಚ್ಛೇದಗಳನ್ನು ಎತ್ತಿಕೊಂಡುದರ ಫಲಿತಾಂಶ ಎಂದು ಯಾವ ರೀತಿಯಲ್ಲೂ ವ್ಯಾಖ್ಯಿಸುವುದು ಸಾಧ್ಯವಿಲ್ಲ. ಆದರೆ ದುರುದ್ದೇಶಗಳನ್ನು ಆರೋಪಿಸುವುದೇ ಚಾರಿತ್ರಿಕ ವಿಶ್ಲೇಷಣೆಯ "ಉಚಿತ" ವಿಧಾನ ಎಂದು ಶೌರಿ ತೃಪ್ತಿಪಟ್ಟುಕೊಂಡಿದ್ದಾರೆ !

(ಮುಂದಿನ ಸಂಚಿಕೆ ನೋಡಿ)

ಆಳಂದ

ಸರ್ಕಾರಕ್ಕೆ ರೈತ ಸಂಘದ ಮನವಿ

ಮಳೆಗಾಲದ ಎರಡು ತಿಂಗಳು ಕಳೆಯುತ್ತಾ ಬಂದರೂ ಮಳೆ ಬಾರದೆ ಇದ್ದುದರಿಂದ ಈಗ ಮಳೆ ಬರದರೂ ಯಾವ ಬೆಳೆ ತೆಗೆಯಲು ಸಾಧ್ಯವಾಗದೆ ಇರುವುದರಿಂದ ಗುಲ್ಬರ್ಗ ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ ಬರಗಾಲ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸಬೇಕೆಂದು ಕರ್ನಾಟಕ ಪ್ರಾಂತರೈತ ಸಂಘದ ಆಳಂದ ತಾಲೂಕು ಘಟಕವು ಸರ್ಕಾರವನ್ನು ಒತ್ತಾಯಿಸಿದೆ.

ಎಲ್ಲಾ ನೀರಾವರಿ ಮೂಲಗಳನ್ನು ಪತ್ತೆ ಹಚ್ಚಿ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಿ ಆಗಾಗ್ಗೆ ಬರಗಾಲಕ್ಕೆ ತುತ್ತಾಗುವುದನ್ನು ತಪ್ಪಿಸಬೇಕೆಂದು ರೈತ ಸಂಘವು ಕೇಳಿದೆ.

ಮಳೆ ಇಲ್ಲದೆ ಕೃಷಿ ಕೆಲಸ ಪೂರ್ತಿ ನಿಂತಿದ್ದರಿಂದ ಕಂಗಲಾಗಿ ಪಟ್ಟಣಗಳಿಗೆ ವಲಸೆ ಹೋಗುತ್ತಿರುವ ರೈತರು ಮತ್ತು ಕೃಷಿ ಕೂಲಿಗಾರರಿಗೆ ತುರ್ತಾಗಿ ಕೆಲಸ ಒದಗಿಸಬೇಕು ಮೇವು ಇಲ್ಲದೆ ದನಕರುಗಳ ಪರಿಸ್ಥಿತಿ ಚಿಂತಾಜನಕವಾಗಿರುವುದರಿಂದ ಪ್ರತಿ ಹಳ್ಳಿಯಲ್ಲಿ ಮೇವಿನ ಡಿಪೋ ತೆರೆಯಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಆಹಾರ ಧಾನ್ಯಗಳ ಕೊರತೆ ಹೆಚ್ಚಾಗಿರುವುದರಿಂದ ಗ್ರಾಮೀಣ ಪಡಿತರ ಪದ್ಧತಿಯನ್ನು ತೀವ್ರವಾಗಿ ಜಾರಿಗೊಳಿಸಬೇಕೆಂದು ತಹಶೀಲ್ದಾರರಿಗೆ ಅರ್ಪಿಸಿದ ಮನವಿಯಲ್ಲಿ ಕೇಳಿಕೊಳ್ಳಲಾಗಿದೆ.

ಮನವಿಯನ್ನು ಪಡೆದ ತಹಶೀಲ್ದಾರರು ತಾಲೂಕಿನ ಪರಿಸ್ಥಿತಿಯ ಬಗ್ಗೆ ಕೂಲಂಕುಶವಾಗಿ ರೈತ ಮುಖಂಡರೊಂದಿಗೆ ಚರ್ಚಿಸಿದರು. ಈ ಬಗ್ಗೆ ನಿರ್ಣಯಗಳನ್ನು ತೆಗೆದುಕೊಂಡು ಕೆಲಸ ಒದಗಿಸಲು ಮತ್ತು ಮೇವಿನ ಡಿಪೋ ಪ್ರಾರಂಭಿಸಲು ತುರ್ತು ಕ್ರಮ ತೆಗೆದುಕೊಳ್ಳುವುದಾಗಿ ಭರವಸೆಯಿತ್ತರು.

ನಿಯೋಗದ ನೇತೃತ್ವವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಪದಾಧಿಕಾರಿಗಳಾದ ಮೇಘರಾಜ ಕಠಾರೆ, ಅರವಿಂದಪ್ಪ ನಾಗೂರ, ಕಲ್ಲಪ್ಪ ಚೀಲ, ಭೀಮರಾವ್ ಕೊಳ್ಳೂರ ಅವರು ವಹಿಸಿದ್ದರು.

(3ನೇ ಪುಟದಿಂದ)

ನಿಜ ಸಂಗತಿ ಮುಚ್ಚಿಟ್ಟ ಶ್ವೇತ ಪತ್ರ

ಳನ್ನೂ ವಿಶ್ವಾಸದಲ್ಲಿ ತೆಗೆದುಕೊಂಡು ಸಮಸ್ಯೆಯನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಬಗೆಹರಿಸುತ್ತಿದ್ದರೆ, ಸ್ವರ್ಣ ಮಂದಿರಕ್ಕೆ ಸೈನ್ಯ ಕಳುಹಿಸುವುದನ್ನೂ, ಅದರಿಂದಾಗಿ ಅಕಾಲಿ ಇಡೀ ಸಮಾಜದಲ್ಲೇ ಸಿಟ್ಟು, ಅಸಮಾಧಾನ ಉಂಟಾಗುವುದನ್ನೂ ತಪ್ಪಿಸಬಹುದಿತ್ತೆಂದೂ ಸೂರಜಿತ್ ಅವರು ಹೇಳಿ, ಸರಕಾರದ ಶ್ವೇತಪತ್ರದಲ್ಲಿ ಉಲ್ಲೇಖಿಸಲ್ಪಡದ ಅಂಶಗಳನ್ನೆಲ್ಲ ಜನರ ಮುಂದಿಡುವುದಾಗಿಯೂ, ಇಂದಿರಾ ಸರಕಾರದ ಅಪಾಯಕಾರಿ ನೀತಿಯನ್ನು ಬಯಲಿಗೆಳೆಯುವುದಾಗಿಯೂ ತಿಳಿಸಿದರು. ಇಂದಿರಾ ಆಳಿಕೆಯಲ್ಲಿ ಜಾತ್ಯಾತೀತತೆ ಸಂಪೂರ್ಣ ನಾಶವಾಗಿದೆಂದೂ, ಆ ಕಾಲಿಗಳಲ್ಲಿ ವಿಶ್ವಾಸ ಹುಟ್ಟಿಸಲು, ದೇಶದ ಸಮಗ್ರತೆ ಕಾಪಾಡಲು ಎಲ್ಲರೂ ದುಡಿಯಬೇಕೆಂದೂ ಹೇಳಿದರು.

ಉತ್ತರ ಕರ್ನಾಟಕ ಪ್ರಾದೇಶಿಕ ಸಮಿತಿ ಸಭೆ

ದಿ.30-7-84 ರಂದು ಮುಂಜಾನೆ ಹತ್ತು ಘಂಟೆಗೆ ಕರ್ನಾಟಕ ಪ್ರಾಂತ ರೈತ ಸಂಘದ ಉತ್ತರ ಕರ್ನಾಟಕ ವಿಭಾಗದ ಪದಾಧಿಕಾರಿಗಳ, ಕಾರ್ಯಕಾರಿ ಸಮಿತಿಯ ಸದಸ್ಯರ ಹಾಗು ಇತರ ಜಿಲ್ಲಾ ಮುಖ್ಯ ಕಾರ್ಯಕರ್ತರ ಸಭೆಯನ್ನು ರಾಯಚೂರು ನಗರದ ರೈತ ಭವನ(ರಾಜೇಂದ್ರ ಗಂಜ) ದಲ್ಲಿ ಕಾ|| ಪಿ. ರಾಮಚಂದ್ರರಾವ್, ಅಧ್ಯಕ್ಷರು ಕರ್ನಾಟಕ ಪ್ರಾಂತ ರೈತ ಸಂಘ, ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದು, ತಪ್ಪದೆ ಸಮಯಕ್ಕೆ ಸರಿಯಾಗಿ ಹಾಜರಾಗಬೇಕೆಂದು ಕೋರುತ್ತೇವೆ.

ಚಂದ್ರಶೇಖರ ಚಾಳೆ.
ಕಾರ್ಯದರ್ಶಿ

ರವೀಂದ್ರನಾಥ ಠಾಗೋರ್ ಮತ್ತು ಕಮ್ಯೂನಿಸಂ ವಿಚಾರ

— ನಂದಗೋಪಾಲ್ ಸೇನ್ ಗುಪ್ತಾ

ಮೇ, 8, 1984 ರಂದು ಪ. ಬಂಗಾಲ ರಾಜ್ಯಾದ್ಯಂತ ವಿಶ್ವ ಕವಿ ರವೀಂದ್ರನಾಥ ಟಾಗೋರರ 123 ನೇ ಜನ್ಮ ದಿನವನ್ನು ಜನತೆ ಸಂಭ್ರಮ ಪೂರ್ಣವಾಗಿ ಆಚರಿಸಿದರು. ಈ ಕುರಿತು "ವೆಸ್ಟ್ ಬೆಂಗಾಲ್" ಪಾಕ್ಷಿಕವು ಟಾಗೋರರ ವಿಚಾರಗಳನ್ನು ಬಿಂಬಿಸುವ ಹಲವು ಲೇಖನಗಳನ್ನು ಪ್ರಕಟಿಸಿತು. ಅದರಲ್ಲೊಂದರ ಕನ್ನಡ ಅನುವಾದ ನಿಮ್ಮ ಮುಂದಿದೆ.

ರವೀಂದ್ರನಾಥ ಠಾಗೋರ್ ಅವರನ್ನು ಕಮ್ಯೂನಿಸ್ಟರೆಂದು ತೋರಿಸಿಕೊಡುವುದು ಸರಿಯಲ್ಲ. ಆರೀತಿ ಮಾಡಲು ನಾವು ಪ್ರಯತ್ನಿಸುತ್ತಿಲ್ಲ. ಕಮ್ಯೂನಿಸ್ಟ್ ವಿಚಾರ ಸರಣಿಯ ತಿರುಳಿನ ಸಾಮೀಪ್ಯಕ್ಕೆ ಅವರು ಬಂದಿದ್ದಾರೆಂದೂ, ಅವರ ಕೊನೆಯ ದಿನಗಳ ಬರಹಗಳಲ್ಲಿ ಕಮ್ಯೂನಿಸಮಿನ ಕಿರಣಗಳಿಂದ ಹೊಸ ಸಮಾಜ ಮತ್ತು ಜೀವನ ಹುಟ್ಟಿಕೊಳ್ಳುತ್ತಾವೆಂಬ ವಿಶ್ವಾಸ ಮೂಡಿಸುತ್ತಿತ್ತೆಂದಷ್ಟೇ ನಾವು ಹೇಳಲಿಚ್ಛಿಸುತ್ತೇವೆ, ಆದ್ದರಿಂದ ಅವರು ಜೀವನ ಸೌಂದರ್ಯ ಮತ್ತು ವೈಶಾಲ್ಯತೆಯನ್ನು ಅರಿತುಕೊಂಡಿದ್ದಾರೆಂದೂ ಅದರ ಜೊತೆಯಲ್ಲಿಯೇ ಜೀವನದ ಸಂಕಷ್ಟ, ದಣಿವು, ರಕ್ತಹೀನತೆಯನ್ನು ಕಂಡು ಹಿಡಿದಿದ್ದಾರೆಂದು ನಾವು ತಿಳಿದಿದ್ದೇವೆ. ಈ ಕಾರಣದಿಂದಲೇ ತಮ್ಮ ಜೀವನದ ಕೊನೆ ದಿನಗಳಲ್ಲಿ ಅವರಿಗೆ ಮಾದರಿಯಾಗಿ ಕಂಡು ಬಂದಿರುವುದು ಸ್ವರ್ಗವಲ್ಲ ಅದು ಭೂಮಿ, ದೇವರಲ್ಲ ಅದು ಮಾನವ ಜೀವಿ. ತಮ್ಮ ಶ್ರಮ ಮತ್ತು ಬೆವರಿನಿಂದ ಜಗತ್ತನ್ನು ಕ್ರಿಯಾತ್ಮಕಗೊಳಿಸಿದವರ ಜೊತೆಯಲ್ಲಿ ಠಾಗೋರರವರು ಆತ್ಮೀಯತೆ ಮತ್ತು ಶಾಂತಿ ಕಂಡರು. ಈ ಮಾನಸಿಕ ಆತ್ಮೀಯತೆಯನ್ನು ಸಮಾಧಾನವನ್ನು ನಾವು ಎತ್ತಿ ತೋರಿಸಲಿಚ್ಛಿಸುತ್ತೇವೆ. ರವೀಂದ್ರ ನಾಥ ಠಾಗೋರ್ ಅವರನ್ನು ತಿಳಿದುಕೊಳ್ಳಲು ಪರಿಗಣಿಸಲು ಹೊಸ ಮಾರ್ಗಕ್ಕೆ ಇದು ದಿಕ್ಸೂಚಿಯಾಗಬಹುದು. ಅದೇ ಸಮಯದಲ್ಲಿ, ನಮ್ಮ ದೇಶದಲ್ಲಿ ನಿಜವಾದ ಕಮ್ಯೂನಿಸ್ಟ್ ವಿಚಾರಗಳ ಕುರಿತು ಪ್ರಾರಂಭಕಾಲದ ವಾತಾವರಣದ ಕುರಿತು ಅವರ ಅನಿಸಿಕೆಗಳೇನೆಂಬುದನ್ನು ನಾವು ನಿರ್ಣಯಿಸಬೇಕಾಗಿದೆ. ಮತ್ತು ಅವರ ಕೆಲವು ಅಭಿಪ್ರಾಯಗಳು ನಮಗೆ ಅನುಕೂಲಕರವಾಗಿವೆಯೋ ಅಥವಾ ವಿರೋಧವಾಗಿವೆಯೋ ಎಂಬುದನ್ನು ಪರಿಗಣಿಸಬೇಕಾಗಿದೆ.

ಈ ವಿಷಯವನ್ನು ಚರ್ಚಿಸಬೇಕಾದರೆ, ಹಿಂದಿನ ಕಾಲಕ್ಕೆ ಹೊಕ್ಕುನೋಡುವುದು ಅಗತ್ಯ. ಮೊದಲನೇ ಮಹಾಯುದ್ಧದ ಸಮಯದಲ್ಲಿ ಟರ್ಕಿಯು, ಜರ್ಮನಿಯ ಗೆಳೆಯನಾಗಿದ್ದಾಗ ಇಂಗ್ಲೆಂಡ್-ಅಮೇರಿಕದ ಒಕ್ಕೂಟ ಟರ್ಕಿಯ ಖಲೀಫನನ್ನು ಅಧಿಕಾರದಿಂದ ಕೆಳಗಿಳಿಸಿತು. ಖಲೀಫಾ ಅವರು ಟರ್ಕಿಯ ಸುಲ್ತಾನರಾಗಿದ್ದರಷ್ಟೇ ಅಲ್ಲ, ಮುಸ್ಲಿಂ ಜಗತ್ತಿನ ಪ್ರಮುಖ ಧಾರ್ಮಿಕ ಮುಖಂಡರಾಗಿದ್ದರು. ನಮ್ಮ ದೇಶದಲ್ಲಿ ಕಾಂಗ್ರೆಸ್ಸು ಕಿಲಾಫತ್ ಚಳುವಳಿಯನ್ನು ತಮ್ಮ ಕಾರ್ಯಕ್ರಮದಲ್ಲಿ ಸೇರಿಕೊಂಡಿತ್ತು. ಯಾಕೆಂದರೆ ಭಾರತದ ಮುಸಲ್ಮಾನರನ್ನು ತಮ್ಮ ಜೊತೆಯಲ್ಲಿ ಇಟ್ಟುಕೊಳ್ಳುವ ಉದ್ದೇಶದಿಂದ ಭಾರತದ ಕೆಲವು ಮುಜಾಹಿದರು ಕಾಲ್ನಡಿಗೆಯಲ್ಲೇ ಅಫಘಾನಿಸ್ಥಾನದ ಮೂಲಕ ಟರ್ಕಿಗೆ ಹೊರಟಿದ್ದರು. ಆಗ ರಶ್ಯಾದ ಕ್ರಾಂತಿ ಮುಕ್ತಾಯವಾಗಿತ್ತು. 1917-1922 ನಡುವೆ ರಶ್ಯದ ಝಾರಶಾಹಿ ಕಿತ್ತೊಗೆಯಲ್ಪಟ್ಟು ಬೋಲ್ಶೆವಿಕರು ಅಧಿಕಾರ ವಹಿಸಿಕೊಂಡಿದ್ದರು. ಬೋಲ್ಶೆವಿಕ್ ಗುಂಪಿನ ಸದಸ್ಯರಾಗಿ ಎಂ. ಎನ್. ರಾಯ್ ಮತ್ತು ಇತರ ಮುಖಂಡರು ಮುಜಾಹಿದರು ಕಿಲಾಫತ್ ಚಳುವಳಿಯಲ್ಲಿ ಭಾಗವಹಿಸುವುದಕ್ಕೆ ತಡೆಯೊಡ್ಡಿ, ಅವರಿಗೆ ಕಮ್ಯೂನಿಸ್ಟ್ ಸಿದ್ಧಾಂತವನ್ನು ತಿಳಿಯ ಹೇಳಿದರು. ಕಲಿಸಿದರು. ಭಾರತಕ್ಕೆ ಹಿಂತಿರುಗಿದ ನಂತರ ಅವರು ಗುಪ್ತ ಸಮಾಜವಾದಿ ಕಮ್ಯೂನಿಸ್ಟ್ ಪಾರ್ಟಿಯನ್ನು ಸಂಘಟಿಸಿದರು.

ಎರಡನೇ ಮಹಾಯುದ್ಧದ ಸಮಯದಲ್ಲಿ, ಜರ್ಮನಿ ಸೋವಿಯತ್ ಯೂನಿಯನ್ನಿನ ಮೇಲೆ ಆಕ್ರಮಣ ಮಾಡಿದಾಗ, ಅದು ಇಂಗ್ಲೆಂಡ್-ಅಮೇರಿಕದ ಕೂಟದೊಡನೆ ಒಪ್ಪಂದ ಮಾಡಿಕೊಂಡಿತು. ಇಂಥ ಒಪ್ಪಂದದ ಕಾರಣದಿಂದಾಗಿ ಬ್ರಿಟಿಶ್ ಸರಕಾರ ತಮ್ಮ ದೇಶದ ಕಮ್ಯೂನಿಸ್ಟ್ ಪಾರ್ಟಿಯ ಮೇಲಿದ್ದ ಪ್ರತಿಬಂಧವನ್ನು ತೆಗೆದರು. ಒಪ್ಪಿಗೆ ಪಡೆದ ರಾಜಕೀಯ ಪಕ್ಷವಾಗಿ ಕಮ್ಯೂನಿಸ್ಟ್ ಪಕ್ಷ ಮೂಡಿಬಂತು. ಈ ಕಾರಣದಿಂದಾಗಿ ಕಲೆ, ಸಂಸ್ಕೃತಿ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಹಾಗೆಯೇ ಸಾಮಾಜಿಕ-ಧಾರ್ಮಿಕ ಮತ್ತು ಆಡಳಿತೆಯ ವಿಚಾರಗಳಲ್ಲಿ, ಈ ರಂಗಗಳಲ್ಲಿ ಸಂಬಂಧ ಇಟ್ಟುಕೊಂಡಂತೆ ಜನರನ್ನು ಕೆಲವು ಹೊಸ ಮುಲ್ಯಗಳು ಆಕರ್ಷಿಸಲ್ಪಟ್ಟವು. ಪುರೋಗಾಮಿ ಸಾಹಿತ್ಯ ಸಂಘಟನೆ, ಇಂಡಿಯನ್ ಪೀಪಲ್ಸ್ ಥಿಯೇಟರ್ ಸಂಘಟನೆಗಳಂಥವು ಹುಟ್ಟಿಕೊಂಡು, ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಜನರು ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ತಮ್ಮ ಮನೋಭಾವನೆಗಳನ್ನು ದೃಢೀಕರಿಸಲು ಪ್ರಾರಂಭಿಸಿದರು. 1941 ರಂದು ರವೀಂದ್ರನಾಥ ಠಾಗೋರ್‌ರವರು ಮೃತರಾದರೂ ಈ ತರದ ಸಾಮಾಜಿಕ-ಮಾನಸಿಕ ಬದಲಾವಣೆಯನ್ನು ಪೂರ್ಣ ನೋಡುವ ಅವಕಾಶ ಅವರಿಗೆ ಸಿಗಲಿಲ್ಲ. 1939 ರಲ್ಲಿ ಯುದ್ಧ ಪ್ರಾರಂಭವಾದಂದಿನಿಂದಲೂ ವಾತಾವರಣ ಬದಲಾವಣೆಯಾಗುತ್ತ ಬಂದಿತ್ತು. ಅದನ್ನು ಅವರು ಸರಿಯಾಗಿ ಪರಿಗಣಿಸಿದ್ದರು. ಆ ಕಾಲಾವಧಿಯಲ್ಲಿ ಕೆಲವು ತೀವ್ರಗಾಮಿ ವಿಚಾರವಾದಿಗಳು, ಚಾರಿತ್ರಿಕ ಭೌತಿಕವಾದದ ಹಿನ್ನೆಲೆಯಲ್ಲಿ ಬಂಕಿಂಚಂದ್ರ, ರಾಮಮೋಹನ್, ವಿದ್ಯಾಸಾಗರ, ವಿವೇಕಾನಂದ, ರವೀಂದ್ರನಾಥ ಠಾಗೋರರವರನ್ನೆಲ್ಲ ಬೂರ್ಜ್ವಾ [ಬಂಡವಾಳಶಾಹಿಗಳು] ಎಂದು ಪರಿಗಣಿಸಿ ಅವರನ್ನು ಪ್ರತ್ಯೇಕಿಸಲು ಪ್ರಚಾರ ನಡೆಸಿದರು. ಸಾಮೂಹಿಕ ಸಾಹಿತ್ಯ, ಸಾಮೂಹಿಕವಾಗಿ ಹಾಡುವಿಕೆ, ಜನತಾ ರಂಗಭೂಮಿಗಳ ಚಳುವಳಿ ತೀವ್ರ ಮುಂದುವರಿದಿತ್ತು, ಸಂಪ್ರದಾಯವಾದ ತಿರಸ್ಕರಿಸಲ್ಪಟ್ಟಿತ್ತು. ಈ ಚಳುವಳಿಯ ರೂಪರೇಷೆ ಮತ್ತು ಕಾರ್ಯಕ್ರಮಗಳನ್ನು ನೋಡಿ ರವೀಂದ್ರನಾಥರಿಗೆ ಗಲಿಬಿಲಿಯಾಯಿತು. ಅವರು ತಮ್ಮ ಅಸಮಾಧಾನವನ್ನು ಕೆಲವು ನಿಬಂಧ ಮತ್ತು ಪತ್ರಗಳ ಮೂಲಕ ಪ್ರದರ್ಶಿಸಿದರು. ಸೃಷ್ಟಿಯಲ್ಲಿ ಮಣ್ಣು ಒಂದೇ ಸತ್ಯ ಗುಲಾಬಿ ಹೂವು ಅಲ್ಲ ಎಂದು ತಿಳಿಯುವುದು ಜಡತ್ವ ಎಂದು ಹೇಳಿದರು. ತುಳಿಯಲ್ಪಟ್ಟವರ ದುಃಖ ದುಮ್ಮಾನಗಳನ್ನು ನಿವಾರಿಸುವ ಸಂಸಮಾನವಲ್ಲದ ಸಾಮಾಜಿಕ ವ್ಯವಸ್ಥೆಯನ್ನು ಬದಲಾವಣೆ ಮಾಡುವಂಥ ಬೇಡಿಕೆಗಳನ್ನು ಪ್ರಚಾರ ಮಾಡಲು ಸಾಹಿತ್ಯ ಮತ್ತು ಕಲೆಯಲ್ಲಿ ಯಾವದೇ ನಿರ್ಬಂಧವಿಲ್ಲ. ಆದರೆ ಲೇಖಕರದ್ದಷ್ಟೇ ಆ ವಿಚಾರ ಇರಬಹುದು. ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಬೇರೆ ಬೇರೆ ಭವಿಷ್ಯಗಳ ಕುರಿತು ನೋಡುವುದು, ಮತ್ತು ಸರ್ವಸಾಧಾರಣ ಒಳ್ಳೆ ರೀತಿಯಲ್ಲಿರುವವರ ಕುರಿತು ಕಲೆಗಳನ್ನು ಪ್ರದರ್ಶಿಸಿದರೆ ಅದು ಅಡಿಗೆಯನ್ನು ಕೆಡಿಸಲಾರದು.

ಕಮ್ಯೂನಿಸ್ಟ್ ವಿಚಾರಗಳ ಮೂಲವನ್ನು ಅವರು ತಲುಪಿದ್ದರೆಂಬುದಕ್ಕೆ, ತಾವು ಸಾಯುವ ಮುಂಚೆ ಹತ್ತು ವರ್ಷಗಳಲ್ಲಿ ಬರೆದ ಪತ್ರ, ಕಾವ್ಯ, ಕಥೆ, ನಿಬಂಧ, ಕಲೆಗಳೇ ಸಾಕ್ಷಿ. ಕಷ್ಟಕ್ಕೆ ಗುರಿಯಾದ ಮತ್ತು ನಿರಾಶ್ರಿತ ಜನರ ಕುರಿತೇ ಅವರು ವಿಚಾರ ಮಾಡುತ್ತಿದ್ದರು, ನಿಜವಾದ ಸಂಕಷ್ಟದ ಅಂತರಾಳವನ್ನೇ ಅವರು ತಲುಪಿ, ಅನೈಕ್ಯತೆ-ಅಸಮರ್ಪಕತೆಯಿಂದ ತುಂಬಿರುವ ಈ ಸಮಾಜ ಬದಲಾವಣೆಯಾಗುತ್ತದೆಂಬ ಆಶಾಕಿರಣವನ್ನು ನೋಡುವ ಕನಸು ಕಾಣುತ್ತಿದ್ದರು. ನಾಗರೀಕತೆಯ ಪ್ರಗತಿಗಾಗಿ ನಗರ-ಬಂದರುಗಳಲ್ಲಿ ದುಡಿಯುತ್ತಿರುವ-ತಮಗೆ ಹತ್ತಿರದವರಾದ ಈ ಜನರನ್ನು ತಾನು ಗುರುತಿಸಲಿಲ್ಲವಲ್ಲಾ ಎಂದು ಅವರು ತಮ್ಮ ದುಃಖ ವ್ಯಕ್ತ ಮಾಡುತ್ತಿದ್ದರು. ಈ ಜನರ ದುಃಖ ಮತ್ತು ಸುಲಿಗೆಯನ್ನು ಘೋಷಿಸುವ ಕವಿಯೊಬ್ಬ ಮುಂದೆ ಹುಟ್ಟಿಯಾನೆಂಬ ಆಶೆಯನ್ನು ಅವರು ಹೊಂದಿದ್ದರು. ಮಾಂಸ ಮತ್ತು ರಕ್ತದ ಉಳಿವಿಕೆಗೆ ಹಸಿವೆ, ನೀರಡಿಕೆ ಮತ್ತು ಆಸೆಗಳನ್ನು ನಿರಾಕರಿಸಲು ಸಾಧ್ಯವಿಲ್ಲೆಂಬುದನ್ನು ತನ್ನ ಕಲಾ ಚಿತ್ರಗಳಲ್ಲಿ ವ್ಯಕ್ತ ಮಾಡುತ್ತಿದ್ದರು. ಅತಿ ಕುರೂಪಿಗಳು ಕೂಡ ಅದರಲ್ಲಿ ಸ್ಥಾನ ಪಡೆಯುತ್ತಿದ್ದರು. ನಾಗರೀಕತೆ ಎಂದು ಜಂಭ ಕೊಚ್ಚಿಕೊಳ್ಳುವ ಮೇಲ್ವರ್ಗದವರನ್ನು, ಸಾಮ್ರಾಜ್ಯಶಾಹಿಗಳ ಸರಕನ್ನು ಮತ್ತು ಆಧುನೀಕತೆಯನ್ನು ಅವರು ಬೈಯ್ಯುತ್ತಿದ್ದರು. ಅವರು ವಿಮೋಚನೆ, ದೈವಿಕತೆಗಳ ಕುರಿತು ಮಾತಾಡುತ್ತಿರಲಿಲ್ಲ. ಇಡೀ ಸಮಾಜವನ್ನು ಬದಲಾವಣೆ ಮಾಡಲು, ಮನುಷ್ಯನನ್ನು ಮೂಢನಂಬಿಕೆ ಮತ್ತು ಬಡತನದಿಂದ ವಿಮೋಚನೆಗೊಳಿಸಲು ವಿಜ್ಞಾನಕ್ಕೆ ಮಾತ್ರ ಶಕ್ತಿ ಇದೆಂದು ಹೇಳುತ್ತಿದ್ದರು. ನೂರು ವರ್ಷಗಳವರೆಗೆ ರವೀಂದ್ರರು ಬದುಕಿರುತ್ತಿದ್ದರೆ ಜಗತ್ತಿನ ಬದಲಾವಣೆ ನೋಡುತ್ತಿದ್ದರು. ಅವರು ಸತ್ತ ಐದು ವರ್ಷಗಳಲ್ಲಿ ಹಲವಾರು ಘಟನೆಗಳ ಮೂಲಕ ಜಗತ್ತಿನಲ್ಲಿ ಬದಲಾವಣೆಗಳಾದವು. ಜಪಾನಿನ ಮೇಲೆ ಅಮೇರಿಕ ಅಣುಬಾಂಬ್ ಒಗೆದ ಕೂಡಲೇ ಯುದ್ಧ ಕೊನೆಗೊಂಡಿತು. ಜರ್ಮನಿ ಇಟಲಿಯ ಸೋಲಿನ ನಂತರ ಯೂರೋಪಿನಲ್ಲೂ ಯುದ್ಧ ನಿಂತಿತು ನಾಝಿಗಳಿಂದ ಆಕ್ರಮಿಸಲ್ಪಟ್ಟ ಫ್ರಾನ್ಸ್ ಸ್ವತಂತ್ರವಾಯಿತು. ಜರ್ಮನಿ ಇಬ್ಭಾಗವಾಯಿತು. ಪಶ್ಚಿಮ ಭಾಗ ಇಂಗ್ಲೆಂಡ್-ಅಮೇರಿಕದ ವಶವಾದರೆ, ಪೂರ್ವಭಾಗ ಸೋವಿಯತ್ ಅಧಿಕಾರಕ್ಕೊಳಪಟ್ಟಿತು. ಚೀನಾದಲ್ಲಿ ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದರು. ಭಾರತ ಆಫ್ರಿಕಗಳನ್ನೊಳಗೊಂಡು ಆಶಿಯಾ ಖಂಡದ ದೇಶಗಳು ಸಾಮ್ರಾಜ್ಯಶಾಹಿಗಳ ಗುಲಾಮಗಿರಿಯಿಂದ ಸ್ವತಂತ್ರರಾದರು. ಉತ್ತರ ಕೊರಿಯಾ, ಮಂಗೋಲಿಯಾ, ವಿಯತ್ನಾಂಗಳಲ್ಲಿ ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದರು. ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ರಾಷ್ಟ್ರೀಯವಾದಿಗಳು ಬೇರೆ ದೇಶಗಳಲ್ಲಿ ಅಧಿಕಾರಕ್ಕೆ ಬಂದರು. ಆದರೆ ಬಹಳಷ್ಟು ದೇಶಗಳಲ್ಲಿ ಕಮ್ಯೂನಿಸ್ಟ್ ಪಾರ್ಟಿ ವಿರೋಧ ಪಕ್ಷವಾಗಿ ಮಾನ್ಯತೆ ಪಡೆಯಿತು. ಯುರೋಪಿನ ಕಮ್ಯೂನಿಸಂ ಮಾಸ್ಕೋ ಪರವಾಗಿಲ್ಲದ್ದರಿಂದ, ರಾಷ್ಟ್ರೀಯತೆಯ ಮೇಲೆ ಅವಲಂಬಿಸಿರುವ ಯೂರೋ ಕಮ್ಯೂನಿಸಂ ಆಯಿತು.

ಟಾಗೋರರಂತೆಯೇ, ರಸೆಲ್ ಮತ್ತು ಎಂ.ಎನ್.ರಾಯ್‌ಗಳಂಥ ತತ್ವಜ್ಞಾನಿಗಳೂ, ಕಮ್ಯೂನಿಸಂನ ಆರ್ಥಿಕ ಮೂಲವನ್ನು ಒಪ್ಪಿಕೊಂಡಿದ್ದರು. ಒಬ್ಬ ವ್ಯಕ್ತಿ ವಿಶಾಲವಾದ ರಾಜ್ಯ ಯಂತ್ರದ ಒಂದು ಭಾಗ ಮಾತ್ರವಲ್ಲ ತನ್ನದೇ ಆದ ಮನುಷ್ಯ ಹಕ್ಕುಗಳನ್ನು ಪಡೆದಿರುವವನಾಗಿರುತಾನೆಂದು ಅವರು ಭಾವಿಸಿದ್ದರು. ರವೀಂದ್ರರೂ ಅದೇ ವಿಚಾರದವರಾಗಿದ್ದರು. ಲಾಭದ ಮೇಲೆ ಅವಲಂಬಿಸಿರುವ ಕಾರ್ಖಾನೆ,ಸಂಸ್ಥೆಗಳನ್ನು ರಾಷ್ಟ್ರೀಕರಿಸುವ, ಪ್ರತಿಯೊಬ್ಬ ಮನುಷ್ಯನ ಶ್ರಮಕ್ಕನುಸರಿಸಿ ಅವನಿಗೆ ಶಿಕ್ಷಣ ಮತ್ತು ನೌಕರಿ ಕೊಡಿಸುವ ಕುರಿತು ಅವರೇನೂ ಹೇಳಿಲ್ಲ. ಆದರೂ ಕೂಡ ಆಗಿನ ಕಾಲದ ಅವರ ಲೇಖನಗಳಲ್ಲಿ ಕಮ್ಯೂನಿಸಂನ ನೆರಳನ್ನು ಕಾಣಬಹುದು ಇದಲ್ಲದೆ, ಮುಂದಾಗಬಹುದಾದ ಜಗತ್ತಿನ ಘಟನೆಗಳ ಕುರಿತು ಅವರ ಪತ್ರಗಳಲ್ಲಿ ಉಲ್ಲೇಖ ಕಾಣಬಹುದು ●

ಅನುವಾದ : — ಎನ್ಕೆ

ಶಿಡ್ಲಘಟ್ಟದಲ್ಲಿ ಭಾರಿ ಬಹಿರಂಗ ಸಭೆ

ಸಿ.ಪಿ.ಐ. (ಎಂ) ನ ಕೇಂದ್ರ ಸಮಿತಿ ನೀಡಿದ್ದ ಕರೆಯ ಮೇರೆಗೆ ಶಿಡ್ಲಘಟ್ಟದಲ್ಲಿ "ಪಂಜಾಬ್ ವಾರಾಚರಣೆ" ಯನ್ನು ಆಚರಿಸಲಾಯಿತು. ಇದರ ಅಂಗವಾಗಿ ಶಿಡ್ಲಘಟ್ಟದಲ್ಲಿ ಜುಲೈ 17ರಂದು ಮಧ್ಯಾಹ್ನ ಪಕ್ಷದ ಸ್ಥಳೀಯ ಸಮಿತಿಯು ಒಂದು ಬಹಿರಂಗ ಸಭೆಯನ್ನೇರ್ಪಡಿಸಿತ್ತು. ಸಭೆಯ ಅಧ್ಯಕ್ಷತೆಯನ್ನು ಕಾ॥ ಎಸ್. ಲಕ್ಷ್ಮಯ್ಯನವರು ವಹಿಸಿದ್ದರು.

ಸಿಪಿಐ (ಎಂ) ನ ರಾಜ್ಯ ಕಾರ್ಯದರ್ಶಿ ಹಾಗು ಶಾಸಕರಾದ ಕಾ॥ ಪಿ. ರಾಮಚಂದ್ರರಾವ್, ರಾಜ್ಯ ಸಮಿತಿಯ ಸೆಕ್ರೆಟೇರಿಯಟ್ ಸದಸ್ಯರಾದ ಕಾ॥ ಎನ್. ಕೆ. ಉಪಾಧ್ಯಾಯ, ಶಾಸಕರಾದ ಕಾ॥ ಎ. ವಿ. ಅಪ್ಪಸ್ವಾಮಿರೆಡ್ಡಿ, ಪ್ರಾಂತ ರೈತ ಸಂಘದ ಖಜಾಂಚಿ ಕಾ॥ ಪಿ. ಜಗನ್ನಾಥ್, ಅವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಡಾಂಗೆಯವರ ನಾಚಿಕೆಗೇಡಿತನ

ಅಖಿಲ ಭಾರತ ಕಮ್ಯೂನಿಸ್ಟ್ ಪಾರ್ಟಿ ಎಂದು ಹೇಳಿಕೊಳ್ಳುವ ಪುಸ್ತಕದ ಬಣವೆಕಾಯಿಯ ಸ್ವಂತ ವೀರರಾದ, ಆ ಪಕ್ಷದ ಪ್ರಧಾನ ಕಾರ್ಯದರ್ಶಿ ಎಂದು ಹೇಳಿಕೊಳ್ಳುವ ಎಸ್. ಎ. ಡಾಂಗೆಯವರೊಬ್ಬರೇ ವಿರೋಧ ಪಕ್ಷಗಳಲ್ಲಿ ಕಾಶ್ಮೀರದ ಫರೂಕ್ ಅಬ್ದುಲ್ಲಾ ಸರಕಾರವನ್ನು ಕಿತ್ತೊಗೆದಿರುವುದನ್ನು ಸ್ವಾಗತಿಸಿದವರಾಗಿದ್ದಾರೆ. ಎಲ್ಲಾ ವಿರೋಧ ಪಕ್ಷಗಳೂ ಕಾಂಗ್ರೆಸ್ಸಿನಲ್ಲಿರುವ ಕೆಲವು ಪ್ರಜಾಪ್ರಭುತ್ವವಾದಿಗಳೂ ಪಕ್ಷಾಂತರಿಗಳಿಗೆ ಸರಕಾರ ರಚಿಸಲು ಅವಕಾಶ ಮಾಡಿಕೊಟ್ಟಿರುವುದನ್ನು ಖಂಡಿಸಿರುವಾಗ, ಅದಕ್ಕೆ ಬೆಂಬಲ ನೀಡಿದ ಒಂಟಿ ಧ್ವನಿ ಡಾಂಗೆಯವರದ್ದಾಗಿದೆ.

ಗಡಿ ಪ್ರಾಂತವಾದ ಜಮ್ಮು ಕಾಶ್ಮೀರದ ರಾಷ್ಟ್ರ ವಿರೋಧಿ, ಜಾತಿವಾದಿ ಪ್ರತ್ಯೇಕತಾ ವಿರೋಧಿ ಶಕ್ತಿಗಳನ್ನೆದುರಿಸಿ ನಮ್ಮ ದೇಶದ ರಕ್ಷಣೆಯನ್ನು ಬಲಪಡಿಸಲು ಪಕ್ಷಾಂತರಿ ಸರಕಾರ ನೆರವಾಗುತ್ತದೆಂಬ ಹೊಸ ಸಂಶೋಧನೆಯನ್ನು ಡಾಂಗೆಯವರು ಶೋಧಿಸಿದ್ದಾರೆ.

ಪಕ್ಷಾಂತರಿಗಳ ಸರಕಾರ ಸ್ಥಾಪಿಸುವುದು, ಚುನಾಯಿಸಲ್ಪಟ್ಟ ಸರಕಾರವನ್ನು ಅನೀತಿಯಿಂದ ಕಿತ್ತೊಗೆಯುವುದರಿಂದ ಈ ಗಡಿ ಪ್ರದೇಶದ ಜನರಲ್ಲಿಯ ವಿಶ್ವಾಸಕ್ಕೆ ಧಕ್ಕೆಯುಂಟಾಗಿ, ಇಡೀ ದೇಶದಲ್ಲೆಲ್ಲಾ ಅದರ ಪರಿಣಾಮ ಪ್ರಸರಿಸಿಕೊಂಡು ಹೋಗುತ್ತದೆಂಬುದನ್ನು ಡಾಂಗೆಯಾಗಲಿ ಇಂದಿರಾಗಾಂಧಿಯಾಗಲಿ ತಿಳಿದಂತೆ ಕಂಡುಬರುತ್ತಿಲ್ಲ. ತನ್ನ ಅಕ್ಷಮ್ಯ ಕೃತಿಯಿಂದಾಗಿ ಪಂಜಾಬಿನಲ್ಲಿ ಸಶಸ್ತ್ರ ಸೈನಿಕರನ್ನು ಪಯೋಗಿಸುವಂಥ ಇಂದಿರಾ ಗಾಂಧಿಯ ಕ್ರಮ, ಜಮ್ಮು – ಕಾಶ್ಮೀರದ ಕುರಿತು ಕೈಗೊಂಡ ನೀತಿ ಛಿದ್ರಕಾರಿ ಶಕ್ತಿಗಳಿಗೆ, ಸಾಮ್ರಾಜ್ಯಶಾಹಿಗಳಿಗೆ ಅನುಕೂಲವಾಗುವುದರಲ್ಲಿ ಸಂಶಯವಿಲ್ಲ.

ಲೆನಿನ್ ಮತ್ತು ಡಿಮಿಟ್ರೋರವರ ಪದಕಗಳನ್ನು ಈಗಲೂ ಹೊಂದಿರುವ ಡಾಂಗೆಯವರಿಗೆ, ಜನತೆಯಿಂದ ಆರಿಸಲ್ಪಟ್ಟ ಸರಕಾರವನ್ನು ಕಿತ್ತೊಗೆದಿರುವುದು ನ್ಯಾಯವೆಂದು ಹೇಳಲು ನಾಚಿಕೆಯಾಗುವುದಿಲ್ಲವೇ?

ಇಂಥ ಹೊಲಸು ರಾಜಕೀಯ ಧೋರಣೆಗಾಗಿಯೇ ಸಿ. ಪಿ. ಐ ಯ ಅಧ್ಯಕ್ಷ ಪದವಿಯನ್ನು ಕಳೆದುಕೊಂಡರು. ತಮ್ಮ ಅಂಥ ಧೋರಣೆಗಾಗಿಯೇ 1962 ರಲ್ಲಿ ಡಾಂಗೆಯವರನ್ನು ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದಾಗ ಸಿ. ಪಿ. ಐ. (ಎಂ) ಅದನ್ನು ವಿರೋಧಿಸ ಬೇಕಾಯಿತು. ಮಾರ್ಕ್ಸ್ ವಾದ-ಲೆನಿನ್ ವಾದ ತನ್ನ ಬಲಿಷ್ಠವಾದ ನಿಷ್ಠೆ ಅಲ್ಲವೆಂದೂ ಸಂದರ್ಭವಾದ, ಸಂಕುಚಿತ ರಾಷ್ಟ್ರೀಯವಾದವೇ ತನ್ನ ಗುರಿ ಎಂಬುದನ್ನು ಕಳೆದ ಎರಡು ದಶಕಗಳಿಂದಲೂ ತೋರಿಸಿ ಕೊಟ್ಟಿದ್ದಾರೆ ಡಾಂಗೆಯವರು.

ಅಚ್ಚಿನಲ್ಲಿದೆ

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಕಾರ್ಯಕ್ರಮ [ಕನ್ನಡದಲ್ಲಿ]

ಮೂರನೆಯ ಆವೃತ್ತಿಯು ಪಾರ್ಟಿಯ 9 ನೆಯ ಅಧಿವೇಶನ ಅಂಗೀಕರಿಸಿದ ತಿದ್ದುಪಡಿಯೊಂದಿಗೆ ಪ್ರಕಟವಾಗಲಿದೆ.

ಪ್ರತಿಗಳಿಗೆ ಪಾರ್ಟಿ ರಾಜ್ಯ ಸಮಿತಿ ಅಥವ ಕ್ರಿಯಾ ಪುಸ್ತಕಾಲಯವನ್ನು ಸಂಪರ್ಕಿಸಿ

ತ್ರಿಪುರ ಪಂಚಾಯತ್ ಚುನಾವಣೆಯಲ್ಲಿ ಸಿ.ಪಿ.ಐ. [ಎಂ] ವಿಜಯ

ಎಡರಂಗ ಸರಕಾರ ಅಸ್ತಿತ್ವದಲ್ಲಿ ಬಂದನಂತರ ತ್ರಿಪುರದಲ್ಲಿ ನಡೆದ ಎರಡನೇ ಸಲದ ಪಂಚಾಯತ್ ಚುನಾವಣೆಯಲ್ಲಿ ಮುಖ್ಯವಾಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಹೆಚ್ಚು ಮತಗಳಿಸಿ ಆರಿಸಿ ಬಂದಿದೆ. ಬಲ ಕಮ್ಯೂನಿಸ್ಟ್ ಪಾರ್ಟಿ ಮತು ಆರ್.ಎಸ್.ಪಿ. ಹೆಚ್ಚು ಸ್ಥಾನ ಬೇಡಿಕೆ ಮಾಡಿ ಕೊನೆಗೆ ಎಡ ಮತ್ತು ಪ್ರಜಾಪ್ರಭುತ್ವ ರಂಗವನ್ನು ಬಿಟ್ಟು ಪ್ರತ್ಯೇಕವಾಗಿ ಸ್ಪರ್ಧಿಸಿ ಸ್ಥಾನಗಳನ್ನು ಕಳೆದುಕೊಂಡಿವೆ.

ಈ ಸಲದ ಮತದಾನದ ಮಹತ್ವವೇನೆಂದರೆ, ಎಡರಂಗ ಸರ್ಕಾರದ ಮೇಲೆ ಮತದಾರರು ಅಪಾರ ವಿಶ್ವಾಸವನ್ನು ವ್ಯಕ್ತಪಡಿಸಿರುವುದೇ ಆಗಿದೆ.

ಪ್ರತ್ಯೇಕತಾ ವಾದವನ್ನು ವಿರೋಧಿಸುತ್ತೇನೆಂದು ಹೇಳುವ ಇಂದಿರಾ ಗಾಂಧಿ, ಜಾತಿವಾದಿ – ಪ್ರತ್ಯೇಕತಾವಾದಿ ತ್ರಿಪುರಾ ಉಪಜಾತಿ ಜುಬಾ ಸಮಿತಿಯೊಡನೆ ಒಪ್ಪಂದ ಮಾಡಿಕೊಂಡು ಚುನಾವಣೆಯ ಸಮಯದಲ್ಲಿ ಸಿ. ಪಿ. ಐ. [ಎಂ] ನ ಕಾರ್ಯಕರ್ತರ ಮೇಲೆ ಹಲ್ಲೆಮಾಡಿ, ಕೆಲವರನ್ನು ಕೊಂದು ಹಾಕುವಲ್ಲಿಗೆ ತನ್ನ ನೀತಿಯನ್ನು ಕೊಂಡೊಯ್ದಿದೆ. ಅಷ್ಟೇ ಅಲ್ಲ ಬಂಗಾಲಿ ಮತ್ತು ಇತರ ಜಾತಿಗಳೊಡನೆ ಜಗಳಕ್ಕೂ ಕೂಡ ಪ್ರಚೋದನೆ ನೀಡಿದೆ. ಇಂಥ ಪರಿಸ್ಥಿತಿಯಲ್ಲಿ ಸಿ.ಪಿ.ಐ. ಎಸ್. ಯು.ಸಿ.ಐ. ಪುರೋಗಾಮಿ ಪಕ್ಷ ಮತ್ತು ಟಿ.ಯು.ಜೆ.ಎಸ್. ನಿಂದ ಹೊರಗೆ ಬಂದಿದ್ದ ಗುಂಪುಗಳೆಲ್ಲ ಸಿ.ಪಿ.ಐ.(ಎಂ) ಜೊತೆಯಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ರಂಗದ ನಿರ್ಣಯದಂತೆ ಸ್ಪರ್ಧಿಸಿದ್ದರೆ ಕಾಂಗ್ರೆಸ್ ಮತ್ತು ಅವರ ಬೆಂಬಲಿಗರನ್ನು ಸಂಪೂರ್ಣ ಸೋಲಿಸಬಹುದಿತ್ತು. ಎಡರಂಗದ ಕೆಲವು ಸಂಗಾತಿಗಳ ಅತ್ಯಾಸೆಯಿಂದಾಗಿ ಕಾಂಗ್ರೆಸ್ಸಿಗೆ ಕೆಲವು ಹೆಚ್ಚು ಸ್ಥಾನ ಸಿಗುವಂತಾಗಿದೆ. ಈ ಸಂಗಾತಿಗಳು ಪಂಚಾಯತ್ ಚುನಾವಣೆಯ ಅನುಭವದಿಂದ ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಎಡರಂಗದ ಐಕ್ಯತೆಯನ್ನು ಇನ್ನಷ್ಟು ಬಲಗೊಳಿಸುವುದು ಅತ್ಯಗತ್ಯ.

ತ್ರಿಪುರ ಪಂಚಾಯತ್ ಚುನಾವಣೆಯ ಫಲಿತಾಂಶ

ಪಕ್ಷಗಳು	ಗೆದ್ದ ಗ್ರಾಮ ಪಂಚಾಯತಿಗಳ ಸಂಖ್ಯೆ 1978	1984
ಸಿ. ಪಿ. ಐ. (ಎಂ)	464	458
ಕಾಂಗ್ರೆ	155	105
ಟಿ. ಯು. ಜೆ. ಎಸ್.	69	68
ಯಾವ ಪಕ್ಷಕ್ಕೂ ಬಹುಮತ ಇಲ್ಲದಿರುವವು		56
ಒಟ್ಟು	688	687

ಪಕ್ಷಗಳ ಬಲಾಬಲ

ಸಿ.ಪಿ.ಐ. (ಎಂ)	3131
ಆರ್.ಎಸ್.ಪಿ.	11
ಪುರೋಗಾಮಿ ಪಕ್ಷ	9
ಟಿ.ಎಚ್.ಪಿ.ಪಿ.	11
ಕಾಂಗ್ರೆ	1156
ಟಿ.ಯು.ಜೆ.ಎಸ್.	611
ಇತರರು	356
ಖಾಲಿ ಇರುವುದು	14
ಒಟ್ಟು	5302

ಛಿದ್ರಕಾರಿ ಶಕ್ತಿಗಳ ವಿರುದ್ಧ ಆಂದೋಲನಕ್ಕೆ ಕರೆ

(1ನೇ ಪುಟದಿಂದ)

ಲೋಕ ಸಭೆಗೆ ಮುಂಚಿತವಾಗಿ ಕಾಶ್ಮೀರದಂತೆಯೇ ಇತರ ಕಾಂಗ್ರೆಯೇತರ ಸರಕಾರಗಳನ್ನುರುಳಿಸುವ ಹಂಚಿಕೆ ಇಂದಿರಾ ಗಾಂಧಿ ಮಾಡಿಕೊಂಡಿರುವಾಗ, ಜನತಾ ಪಕ್ಷ ತನ್ನ ಪಕ್ಷದಲ್ಲಿ ಒಮ್ಮತ ಉಂಟು ಮಾಡಿ, ಆಡಳಿತೆಯಲ್ಲಿ ದಕ್ಷತೆ ತರುವುದರಲ್ಲಿ ವಿಫಲವಾಗಿರುವುದು ದುರದೃಷ್ಟಕರವೆಂದು ರಾಜ್ಯ ಸಮಿತಿ ಅಭಿಪ್ರಾಯ ಪಟ್ಟು 38 ಜನತಾ ಶಾಸಕರ ನಿಲುಮೆ ಗೊಂದಲ ಉಂಟು ಮಾಡಬಹುದೆಂಬ ಸಂಶಯ ವ್ಯಕ್ತ ಮಾಡಿದೆ. ಹೆಗಡೆ ಸರಕಾರ ಉರುಳಿಸಿ ಕಾಂಗ್ರೆ ಸರಕಾರ ಸ್ಥಾಪಿಸುವ ಕುಯುಕ್ತಿಗೆ ಜನತಾ ಶಾಸಕರ ವರ್ತನೆ ಸಹಾಯವಾಗಲಾರದೆಂದು ಅಪೇಕ್ಷಿಸಿದೆ.

ಆದ್ದರಿಂದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬಲಸಂವರ್ಧನೆ ಅತ್ಯಗತ್ಯವೆಂದು ಭಾವಿಸಿ ಆ ದಿಸೆಯಲ್ಲಿ ಕಾರ್ಯ ಮುಂದುವರಿಸಬೇಕೆಂದು ಕರೆ ಕೊಟ್ಟಿದೆ.

ಸ್ಥಳೀಯರಿಗೇ ಉದ್ಯೋಗವೆನ್ನುವ ಮಣ್ಣಿನ ಮಕ್ಕಳ ವಾದಕ್ಕೆ ಮನ್ನಣೆ ನೀಡಿ ಕೇಂದ್ರ (ಸರಕಾರದ ಉದ್ಯಮಗಳಲ್ಲಿ ಶೇ 80 ರಷ್ಟು ಉದ್ಯೋಗಗಳನ್ನು ಸ್ಥಳೀಯರಿಗೆ, ಕನ್ನಡ ತಿಳಿದವರಿಗಷ್ಟೇ ಮೀಸಲಿಡಬೇಕೆನ್ನುವ ಶಿಫಾರಸನ್ನು ಮಹಿಷಿ ಸಮಿತಿ ನೀಡಿದ್ದು, ರಾಜ್ಯ ಸರಕಾರ ಅದನ್ನು ಒಪ್ಪಿಕೊಂಡಿದ್ದು ವಿಷಾದನೀಯವೆಂದು ರಾಜ್ಯ ಸಮಿತಿ ಅಭಿಪ್ರಾಯ ವ್ಯಕ್ತ ಮಾಡಿದೆ. ಪ್ರತ್ಯೇಕತಾ ಮನೋಭಾವನೆಯನ್ನು ಬಿತ್ತಿ ರಾಷ್ಟ್ರದ ಸಮಗ್ರತೆಗೆ ಧಕ್ಕೆ ತರುವ, ಸಂವಿಧಾನ ಬದ್ಧ ಚಲನಾ ಸ್ವಾತಂತ್ರ್ಯದ ಹಕ್ಕಿಗೆ ಊನ ತರುವ ಈ ತೀರ್ಮಾನವನ್ನು ರಾಜ್ಯ ಸರಕಾರ ಬಿಟ್ಟು ಕೊಡಬೇಕೆಂದು ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ರಾಜ್ಯದಲ್ಲಿ ಅಧ್ಯಾಪಕರ ನೇಮಕಾತಿಯಲ್ಲಿ ವಿಳಂಬವಾಗುತ್ತಿರುವುದರಿಂದ ಶಿಕ್ಷಣ ರಂಗದಲ್ಲಿ ಅವ್ಯವಸ್ಥೆ ಉಂಟಾಗಿದೆಂದೂ, ಈಗಿರುವ ಸ್ಥಳೀಯ ಶಿಕ್ಷಕರನ್ನು ಕಾಯಂ ಮಾಡಿ, ಶಾಲೆಗಳಿಗೆ ಬೇಕಾಗುವ ಶಿಕ್ಷಕರನ್ನು ಕೂಡಲೇ ನೇಮಕ ಮಾಡಿ ಕೊಳ್ಳಬೇಕೆಂದೂ ಒತ್ತಾಯ ಪಡಿಸಿದೆ.

ರಾಜ್ಯದ ರೈತರೂ, ಕೃಷಿ ಕಾರ್ಮಿಕರೂ, ವಸತಿ ಹೀನರೂ, ಕನಿಷ್ಟ ವೇತನಕ್ಕೋಸ್ಕರ ಕಾರ್ಮಿಕರು ಹಾಗೆಯೇ ಇತರ ಕೆಲಸಗಾರರೆಲ್ಲ ಪ್ರಾಂತ ರೈತ ಸಂಘದ ಮತ್ತು ಸಿಐಟಿಯು ಕರೆಯ ಮೇರೆಗೆ ಜೂನ್ 11 ರಂದು ಜಂಟಿಯಾಗಿ ಧರಣಿ, ಮತ ಪ್ರದರ್ಶನ ನಡೆಸಿ ಬಂಧನಕ್ಕೊಳಗಾಗಿದ್ದಕ್ಕಾಗಿ ಅವರಿಗೆಲ್ಲ ಅಭಿನಂದನೆ ಸಲ್ಲಿಸಿದೆಯಷ್ಟೇ ಅಲ್ಲ ರೈತ–ಕಾರ್ಮಿಕರ ಐಕ್ಯತೆಯನ್ನು ಸಾಧಿಸಿ ಚಳುವಳಿ ಮುಂದುವರಿಯಲೆಂದು ಹಾರೈಸಿದೆ.

ಮಂಗಳೂರ

ಎಸ್. ಎಫ್. ಐ. ನಿಂದ ಮತ ಪ್ರದರ್ಶನ

ಎಸ್. ಎಫ್. ಐ. ಜಿಲ್ಲಾ ಸಮಿತಿ ನೇತೃತ್ವದಲ್ಲಿ, ಮಂಗಳೂರು ವಿಶ್ವವಿದ್ಯಾನಿಲಯದ ಕಛೇರಿ ಎದುರು ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ನಿರ್ಬಂಧಿಸಿದ ಮಂಗಳೂರು ವಿ. ವಿ. ತೀರ್ಮಾನವನ್ನು ಹಿಂತೆಗೆಯಬೇಕೆಂದು ಒತ್ತಾಯಿಸಿ ಮತ ಪ್ರದರ್ಶನ ನಡೆಸಿ, ಸಬ್ ರಿಜಿಸ್ಟ್ರಾರ್ ರವರಿಗೆ, ಮನವಿ ಅರ್ಪಿಸಿತು. ಬಳಿಕ, ಈ ಕಾಲೇಜುಗಳಲ್ಲಿ ತರಗತಿಗಳನ್ನು ನಡೆಸಲು ಅಗತ್ಯ ಸೌಲಭ್ಯಗಳನ್ನು ಒದಗಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿ ಕಛೇರಿ ಎದುರು ಮತ ಪ್ರದರ್ಶನ ನಡೆಸಿ ಜಿಲ್ಲಾಧಿಕಾರಿಯವರಿಗೂ ಮನವಿಯನ್ನು ಅರ್ಪಿಸಿತು. ವಿದ್ಯಾರ್ಥಿಗಳ ಪ್ರವೇಶವನ್ನು ನಿರ್ಬಂಧಿಸಿದ ಪ್ರಥಮ ದರ್ಜೆಯ ಕಾಲೇಜುಗಳಿಗೆ ಪ್ರವೇಶ ಅವಕಾಶವನ್ನು ನೀಡದಿದ್ದಲ್ಲಿ ಪ್ರವೇಶ ನೀಡುವವರೆಗೆ ಚಳುವಳಿ ದಾರಿ ಹಿಡಿಯಬೇಕಲ್ಲದೆ ಈ ಬಗ್ಗೆ ಇತರ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆಯೊಂದಿಗೆ ಕೂಡಿ ಬೇಡಿಕೆ ಈಡೇರುವವರೆಗೆ ಐಕ್ಯ ಹೋರಾಟ ನಡೆಸುವುದೆಂದು ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ನಟೇಕರ್ ತಿಳಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಹಾಗೂ ಸಹಕರಿಸಿದ ವಿದ್ಯಾರ್ಥಿಗಳಿಗೆ ಎಸ್. ಎಫ್. ಐ. ಜಿಲ್ಲಾ ಸಮಿತಿ ಅಭಿನಂದನೆಯನ್ನು ಸಲ್ಲಿಸಿದೆ.

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K. V. Temple Street, Sultanpet. B-53. Phone : 24154

Editor : P. Ramachandra Rao

Managing Editor : N. K. Upadhyaya